
ಶ್ರೀ ಮೂಲ ರಾಮೋ ವಿಜಯತೆ

ಗಂಗೆಯನ್ನು ಸಾಕ್ಷಾತ್ಕರಿಸಿಕೊಂಡ

ಶ್ರೀ ಮದುತ್ತರಾದಿ ಮಠಾಧೀಶರು




ಗಂಗಾ ದೇವಿ



ಶ್ರೀ ಸತ್ಯಸಂಕಲ್ಪರು ಬೃಂದಾವನ

ಲೇಖಕರು : ಎಸ್. ಕೆ. ಬದರೀನಾಥ್




ಶ್ರೀ ಸತ್ಯಪರಾಯಣರು

ಸುಶೀಲಾ ಪ್ರಕಾಶನ

52–1 (71–1) ಗಾಂಧೀ ಬಜಾರ್, ಬೆಂಗಳೂರು – 560 004

ಶ್ರೀ ಸೀತಾಮನೋಭಿರಾಮ ಶ್ರೀರಾಮಚಂದ್ರ ನೀನೇ ಗತಿ





ನನ್ನ ಜನುಮದಾತ **ಶ್ರೀ ಶ್ರೀ ಸತ್ಯಪರಾಯಣತೀರ್ಥರ ವಂಶಜಾತ ಶ್ರೀ ಎಸ್. ಬಿ. ಕೃಷ್ಣಮೂರ್ತಿ** ತಮ್ಮ ಜೀವಿತ ಕಾಲದಲ್ಲಿ ದೇಹಿ ಎಂದವರಿಗೆ ನಾಸ್ತಿ ಎನ್ನದ ಪುಣ್ಯಜೀವಿಯು ಬದುಕಿದ್ದ ಕಾಲದಲ್ಲಿ ಏನನ್ನೂ ಅವರಿಗೆ ಮಾಡಲಾಗದ ನಾನು ಅವರ

ಹಾಗೂ

ನನ್ನ ಸಕಲ ಅಭ್ಯುದಯಕ್ಕೂ, ನನಗೆ ಒಂದು ತುತ್ತು ಅನ್ನಕ್ಕೂ, ವಸತಿಗೂ ಕಾರಣಕರ್ತಳಾಗಿ ಪರಮಾತ್ಮ ಜಗದ್ವಂದ್ಯ, ಕರುಣಾಮೂರ್ತಿ, ನನ್ನ ಕೈಹಿಡಿದು ಕ್ಷಣ ಕ್ಷಣದಲ್ಲಿ ಕಾಪಾಡುತ್ತಿರುವ ಶ್ರೀ ಸೀತಾರಾಮಚಂದ್ರನ ಕೃಪಾಶೀರ್ವಾದಕ್ಕೆ ನನ್ನನ್ನು ಪಾತ್ರನನ್ನಾಗಿಸಿರುವ **ನನ್ನ ಪೂಜ್ಯ ತಾಯಿ ಶ್ರೀಮತಿ ನಾಗಮ್ಮ (ಸುಶೀಲಾಬಾಯಿ)** ಅವರ ಚರಣಾರವಿಂದಗಳಲ್ಲಿ ಈ ಕೃತಿಯನ್ನು ಅರ್ಪಿಸಿದ್ದೇನೆ.

ಎಸ್. ಕೆ. ಬದರೀನಾಥ್



ಶ್ರೀ ದಿಗ್ವಿಜಯರಾಮೋ ವಿಜಯತೇ

ಮುನ್ನುಡಿ

ಶ್ರೀ ಮಧ್ವಾಚಾರ್ಯರ ಚರಿತ್ರೆಯನ್ನು ವರ್ಣನೆ ಮಾಡುವ ಶ್ರೀ ಸುಮಧ್ವ ವಿಜಯದಲ್ಲಿ ''भित्वा भुवं देवनदी जगाम'' ಶ್ರೀಮನ್ಮಧ್ವಾಚಾರ್ಯರನ್ನು ಸೇವಿಸುವುದಕ್ಕಾಗಿ ಸಾಕ್ಷಾತ್ ಗಂಗಾದೇವಿಯು ಆಚಾರ್ಯರು ಇದ್ದ ಕುಟೀರಕ್ಕೆ ಧಾವಿಸಿದಳು ಎನ್ನುತ್ತಾರೆ ಪಂಡಿತಾಚಾರ್ಯರು. ಲೋಕದ ಜನರನ್ನು ಗಂಗೆ ಪವಿತ್ರ ಮಾಡಿದರೆ ಆ ಗಂಗೆಯನ್ನೂ ಪವಿತ್ರ ಮಾಡುವವರು ಮಧ್ವಾಚಾರ್ಯರು. ಅಂತಹ ಆಚಾರ್ಯರ ಮೂಲ ಮಹಾಪರಂಪರೆ ಎನಿಸಿದ ಶ್ರೀ ಉತ್ತರಾದಿ ಮಠದಲ್ಲಿ ಅನೇಕ ಯತಿವರೇಣ್ಯರು ಗಂಗೆಯನ್ನು ಸಾಕ್ಷಾತ್ಕರಿಸಿಕೊಂಡಿದ್ದಾರೆ.

ಆ ಮಹನೀಯರು ನಿತ್ಯ ನಿರಂತರ ನಡೆಸುವ ಸರ್ವಮೂಲಸುಧಾದಿ ಗ್ರಂಥಗಳ ಪಾಠಪ್ರವಚನದಿಂದ ಗಂಗೆ ಇವರಿದ್ದಲ್ಲಿಯೇ ಸನ್ನಿಹಿತಳಾಗಿದ್ದಾಳೆ.

धाटी श्री जयतीर्थवर्यवचसां चेटीभवत्स्वर्धुनी । ಶ್ರೀಮನ್ನ್ಯಾಯಸುಧೆ ಎಂಬ ಮಹಾರಾಣಿಗೆ ಗಂಗೆ ದಾಸಿಯಾಗಿದ್ದಾಳೆ ಎನ್ನುತ್ತಾರೆ ಸತ್ಯಪ್ರಿಯತೀರ್ಥರು.

तत्रैव गंगा यमुनाच तत्र यत्राऽयुतो हरिकथाप्रसङ्गाः । ಎಂಬಂತೆ ಎಲ್ಲಿ ಭಗವತ್ಕಥಾಪ್ರಸಂಗವೋ ಅಲ್ಲಿ ಗಂಗೆ–ಯಮುನೆಯರು ನೆಲೆಸಿರುತ್ತಾರೆ.

ಅಂತಹ ಮಹಾಮಹಿಮರ ಅನೇಕ ಚರಿತ್ರೆಗಳನ್ನೊಳಗೊಂಡ ಈ ಹೊತ್ತಿಗೆಯನ್ನು ನಮ್ಮ ಆತ್ಮೀಯರಾದ ಶ್ರೀ ಬದರೀನಾಥ ಅವರು ಅನೇಕ ಪುಸ್ತಕಗಳನ್ನು ಸಂಶೋಧಿಸಿ ಬರೆದಿದ್ದಾರೆ.

ಈಗಾಗಲೇ ಈ ಲೇಖಕರಿಂದ ಅನೇಕ ಪುಸ್ತಕಗಳು ಹೊರಬಂದಿದ್ದು ಗುರುಸ್ಮರಣೆಯನ್ನು ಮಾಡಿಸುವ ಈ ಕೃತಿಯು ಪುಣ್ಯದಾಯಕವಾಗಿದೆ.

ಶ್ರೀ ಬದರೀನಾಥ ಅವರು ಈ ತರಹದ ಹರಿ–ಗುರುಗಳ ಸೇವೆಯನ್ನು ತಾವು ಮಾಡಿ ತಮ್ಮ ಕುಟುಂಬದವರಿಂದಲೂ ಮಾಡಿಸಲಿ ಎಂದು ಹಾರೈಸುವ

– ಸತ್ಯಧ್ಯಾನಾಚಾರ್ಯಕಟ್ಟಿ

ಶ್ರೀ ದಿಗ್ವಿಜಯರಾಮೋ ವಿಜಯತೇ

ಮುನ್ನುಡಿ

ಶ್ರೀ ಮಧ್ವಾಚಾರ್ಯರ ಚರಿತ್ರೆಯನ್ನು ವರ್ಣನೆ ಮಾಡುವ ಶ್ರೀ ಸುಮಧ್ವ ವಿಜಯದಲ್ಲಿ ''**भित्वा भुवं देवनदी जगाम**'' ಶ್ರೀಮನ್ಮಧ್ವಾಚಾರ್ಯರನ್ನು ಸೇವಿಸುವುದಕ್ಕಾಗಿ ಸಾಕ್ಷಾತ್ ಗಂಗಾದೇವಿಯು ಆಚಾರ್ಯರು ಇದ್ದ ಕುಟೀರಕ್ಕೆ ಧಾವಿಸಿದಳು ಎನ್ನುತ್ತಾರೆ ಪಂಡಿತಾಚಾರ್ಯರು. ಲೋಕದ ಜನರನ್ನು ಗಂಗೆ ಪವಿತ್ರ ಮಾಡಿದರೆ ಆ ಗಂಗೆಯನ್ನೂ ಪವಿತ್ರ ಮಾಡುವವರು ಮಧ್ವಾಚಾರ್ಯರು. ಅಂತಹ ಆಚಾರ್ಯರ ಮೂಲ ಮಹಾಪರಂಪರೆ ಎನಿಸಿದ ಶ್ರೀ ಉತ್ತರಾದಿ ಮಠದಲ್ಲಿ ಅನೇಕ ಯತಿವರೇಣ್ಯರು ಗಂಗೆಯನ್ನು ಸಾಕ್ಷಾತ್ಕರಿಸಿಕೊಂಡಿದ್ದಾರೆ.

ಆ ಮಹನೀಯರು ನಿತ್ಯ ನಿರಂತರ ನಡೆಸುವ ಸರ್ವಮೂಲಸುಧಾದಿ ಗ್ರಂಥಗಳ ಪಾಠಪ್ರವಚನದಿಂದ ಗಂಗೆ ಇವರಿದ್ದಲ್ಲಿಯೇ ಸನ್ನಿಹಿತಳಾಗಿದ್ದಾಳೆ.

धाटी श्री जयतीर्थवर्यवचसां चेटीभवत्स्वर्धुनी । ಶ್ರೀಮನ್ನ್ಯಾಯಸುಧೆ ಎಂಬ ಮಹಾರಾಣಿಗೆ ಗಂಗೆ ದಾಸಿಯಾಗಿದ್ದಾಳೆ ಎನ್ನುತ್ತಾರೆ ಸತ್ಯಪ್ರಿಯತೀರ್ಥರು.

तत्रैव गंगा यमुनाच तत्र यत्राऽच्युतो हरिकथाप्रसङ्गः । ಎಂಬಂತೆ ಎಲ್ಲಿ ಭಗವತ್ಕಥಾಪ್ರಸಂಗವೋ ಅಲ್ಲಿ ಗಂಗೆ–ಯಮುನೆಯರು ನೆಲೆಸಿರುತ್ತಾರೆ.

ಅಂತಹ ಮಹಾಮಹಿಮರ ಅನೇಕ ಚರಿತ್ರೆಗಳನ್ನೊಳಗೊಂಡ ಈ ಹೊತ್ತಿಗೆ ಯನ್ನು ನಮ್ಮ ಆತ್ಮೀಯರಾದ ಶ್ರೀ ಬದರೀನಾಥ ಅವರು ಅನೇಕ ಪುಸ್ತಕಗಳನ್ನು ಸಂಶೋಧಿಸಿ ಬರೆದಿದ್ದಾರೆ.

ಈಗಾಗಲೇ ಈ ಲೇಖಕರಿಂದ ಅನೇಕ ಪುಸ್ತಕಗಳು ಹೊರಬಂದಿದ್ದು ಗುರುಸ್ಮರಣೆಯನ್ನು ಮಾಡಿಸುವ ಈ ಕೃತಿಯು ಪುಣ್ಯದಾಯಕವಾಗಿದೆ.

ಶ್ರೀ ಬದರೀನಾಥ ಅವರು ಈ ತರಹದ ಹರಿ–ಗುರುಗಳ ಸೇವೆಯನ್ನು ತಾವು ಮಾಡಿ ತಮ್ಮ ಕುಟುಂಬದವರಿಂದಲೂ ಮಾಡಿಸಲಿ ಎಂದು ಹಾರೈಸುವ

– ಸತ್ಯಧ್ಯಾನಾಚಾರ್ಯಕಟ್ಟಿ

ಶ್ರೀ ಮೂಲರಾಮೋ ವಿಜಯತೆ

ಅರಿಕೆ

ಶ್ರೀ ಹಂಸನಾಮಕ ಶ್ರೀಹರಿಯಿಂದ ಪ್ರವರ್ತಿತವಾದ ಮಹಾಪರಂಪರೆಯನ್ನು ಹೊಂದಿರುವ ಮೂಲಮಠವು ಶ್ರೀಮದುತ್ತರಾದಿ ಮಠವು. ಶ್ರೀ ವಾಯುದೇವರ ಅವತಾರರಾದ ಶ್ರೀಮದಾನಂದತೀರ್ಥರವರ ಪರಂಪರೆಯಲ್ಲಿ ಮೂಲಮಠದ ಪೀಠವನ್ನಲಂಕರಿಸಿದ ಶ್ರೀ ಸತ್ಯಬೋಧರು, ಶ್ರೀ ಸತ್ಯಸಂಧರು ಹಾಗೂ ಶ್ರೀ ಸತ್ಯಸಂಕಲ್ಪರು ಗಂಗಾದೇವಿಯನ್ನು ಪ್ರತ್ಯಕ್ಷಿಸಿಕೊಂಡವರು. ಅಂತಹ ಮಹಾಮಹಿಮರನ್ನು ನೆನೆಯುವುದೇ ಒಂದು ಸುಕೃತ ಪುಣ್ಯ.

ಗಂಗೆಯನ್ನು ಯಾವಾಗ ನೋಡುವೆನು, ಯಾವಾಗ ಹೋಗುವೆನು ಎಂದು ನಿತ್ಯವೂ ಹಂಬಲಿಸುವವನು ವಿಷ್ಣುಲೋಕಕ್ಕೆ ಹೋಗುವನು. ಅಂತಹ ಪರಮ ಪವಿತ್ರಳಾದ ಗಂಗೆಯನ್ನು ಶ್ರೀಮದಾನಂದತೀರ್ಥರು ಕಂದುಕಸ್ತುತಿಯಲ್ಲಿ **'ಅಂಬರಗಂಗಾ ಚುಂಬಿತಪಾದಃ ಪದತಲವಿದಲಿತ ಗುರುತರ ಶಕಟಃ'** ಎಂದು ಪರಮಾತ್ಮನ ಪಾದವನ್ನು ಸ್ತುತಿಸುತ್ತಾ ಗಂಗೋದ್ಭವವನ್ನು ಹೇಳಿದ್ದಾರೆ. ಅಂತ ವಿಷ್ಣುಪದಿಯನ್ನು ಸಾಕ್ಷಾತ್ಕರಿಸಿಕೊಂಡ ಶ್ರೀಮದುತ್ತರಾದಿ ಮಠಾಧೀಶರ ಮಹಿಮೆಯನ್ನು ಎಷ್ಟು ವರ್ಣಿಸಿದರು ಅಲ್ಪ.

ನನ್ನ ಆರಾಧ್ಯದೈವನಾದ ಜಗನ್ಮಂಗಳಮೂರ್ತಿ ಕರುಣಾಸಾಗರ ಶ್ರೀ ಸೀತಾವಲ್ಲಭನ ಅನುಗ್ರಹ ಹಾಗೂ ನನ್ನ ಕುಲಗುರುಗಳಾದ ಶ್ರೀ ಸತ್ಯಪರಾಯಣ ತೀರ್ಥರ ಕೃಪಾಕಟಾಕ್ಷ ಹಾಗೂ ನನ್ನ ಜನುಮದಾತೆ ಶ್ರೀಮತಿ ನಾಗಮ್ಮನ (ಶ್ರೀಮತಿ ಸುಶೀಲಾಬಾಯಿ, ಶ್ರೀ ಎಸ್. ಬಿ. ಕೃಷ್ಣಮೂರ್ತಿಯವರ ಧರ್ಮಪತ್ನಿ) ಆಶೀರ್ವಾದದಿಂದ ಈ ಕೃತಿಯನ್ನು ಬರೆಯಲು ಸಾಧ್ಯವಾಯಿತು. ಹಲವಾರು ಗ್ರಂಥಗಳನ್ನು ಬಳಸಿಕೊಂಡು ಈ ಕೃತಿಯನ್ನು ಬರೆದಿದೆ. ಬರಹಗಾರರಿಗೆ ನಾನು ಋಣಿಯಾಗಿದ್ದೇನೆ.

ಅಲ್ಲದೇ, ಪಂಡಿತೋತ್ತಮರು, ವ್ಯವಹಾರ ಕುಶಲರು, ವಾಗ್ಮಿಗಳು, ಹೃದಯ ವೈಶಾಲ್ಯವುಳ್ಳವರು ಆದ ಶ್ರೀ ಸತ್ಯಧ್ಯಾನಚಾರ್ಯ ಕಟ್ಟಿಯವರು ಮುನ್ನುಡಿಯನ್ನು ದಯಪಾಲಿಸಿದ್ದಾರೆ. ಅವರಿಗೆ ಅನಂತಾನಂತ ನಮನಗಳು.

ನನ್ನ ಮೊಮ್ಮಕ್ಕಳಾದ ಚಿ|| ನಾಗಶ್ರೀ, ಚಿ|| ದೀಪ್ತಿ, ಚಿ|| ರಂಗಾ (ಚಾರ್ಯ) ಹಾಗೂ ಚಿ|| ಶ್ರೀಕಾಂತನಿಗೆ ನನ್ನ ಕುಲಗುರುಗಳಾದ ಶ್ರೀ ಸತ್ಯಪರಾಯಣತೀರ್ಥರ ಅನುಗ್ರಹವಿರಲಿ.

ಎಸ್. ಕೆ. ಬದರೀನಾಥ್

ಶ್ರೀರಾಮ

ನಿಮ್ನಗಾನಾಂಯಥಾಗಂಗಾದೇವನಾಮಾಽಚ್ಯುತೋ ಯಥಾ ।
ವೈಷ್ಣವಾನಾಂ ಯಥಾ ಶಂಭುಃ ಪುರಾಣಾಮಿದ ಕಥಾ ॥

ನದಿಗಳಲ್ಲಿ ಗಂಗೆ, ದೇವತೆಗಳಲ್ಲಿ ಅಚ್ಯುತ, ವಿಷ್ಣುಭಕ್ತರಲ್ಲಿ ಶಂಕರ, ಕ್ಷೇತ್ರಗಳಲ್ಲಿ ವಾರಣಾಸಿ ಹೇಗೋ ಹಾಗೆಯೇ ಪುರಾಣಗಳಲ್ಲಿ ಶ್ರೀಮದ್ಭಾಗವತವು ಸರ್ವಶ್ರೇಷ್ಠ ವಾಗಿದೆ. ಅಂತೆಯೇ ಶ್ರೀಮದುತ್ತರಾದಿ ಮಠವು ಶ್ರೇಷ್ಠವಾಗಿದೆ.

ಸ್ವರ್ಗ, ಭೂಮಿ ಮತ್ತು ಪಾತಾಳಗಳಲ್ಲಿ ಹರಿದು ತ್ರಿಪಥಗಾ ಎಂಬ ಹೆಸರಿನಿಂದ ಕರೆಸಿಕೊಳ್ಳುವಳು, ಶ್ರೀ ಮಹಾವಿಷ್ಣುವಿನ ಪಾದವನ್ನು ಬ್ರಹ್ಮನು ತೊಳೆದಾಗ ಉದ್ಭವ ಳಾದವಳು, ಶಶಾಂಕನನ್ನು ತಲೆಯ ಮೇಲೆ ಇಟ್ಟುಕೊಂಡ ಶಿವನ ಶಿರದ ಮೇಲೆ ವಿರಾಜಮಾನಳಾದವಳು ಗಂಗೆ. ಪವಿತ್ರ ವಸ್ತುಗಳಿಗಿಂತ ಮಿಗಿಲಾದವಳು, ಪವಿತ್ರ ಳಾದವಳು, ಮಂಗಳಕರಳಾದವಳು, ಸರ್ವಪಾಪನಿವಾರಕಳು ಗಂಗಾದೇವಿ. ಗಂಗಾ ನದಿಯಲ್ಲಿ ಸ್ನಾನ ಮಾಡುವುದು ಮಹಾಪುಣ್ಯವು. ಗಂಗಾಸ್ನಾನ ಮಾಡಿದವರನ್ನು ನೋಡುವುದರಿಂದಲೇ ಸ್ವರ್ಗವಾಸ ಮಾಡುವ ಭಾಗ್ಯವೊದಗುವುದು.

ಗಂಗಾಯಾಃ ಪುಲಿನೇಯಸ್ತು ಪಿಂಡಾನ್ನಿರ್ವಪತೇ ನರಃ ।
ಗಂಗಾ ಜಲಸಮಾಯುಕ್ತಂ ಮುಕ್ತಾಸ್ತತ್ಪಿತರೋಽಖಿಲಾಃ ॥

ಪಿತೃಗಳಿಗೆ ಗಂಗಾನದಿಯ ತೀರದಲ್ಲಿ ಗಂಗಾಜಲದಿಂದ ಪಿಂಡಪ್ರದಾನವನ್ನು ಯಾರು ಮಾಡುತ್ತಾರೋ ಮತ್ತು ಅರ್ಘ್ಯವನ್ನೀಡುವರೋ ಅಂತಹವರ ಎಲ್ಲಾ ಪಿತೃಗಳು ಮುಕ್ತರಾಗುತ್ತಾರೆ.

ನದಾನದ್ಯಃ ತೀರ್ಥಾನಿ ಪುಣ್ಯಾನ್ಯಾಯತನಾನಿ ಚ ।
ಗಂಗಾಬಿಂದ್ವಭಿಷೇಕಸ್ಯ ಕಲಾಂನಾರ್ಹಂತಿ ಷೋಡಶೀಮ್ ॥

ಪ್ರಪಂಚದಲ್ಲಿರುವ ಎಲ್ಲಾ ನದಿಗಳು, ತೀರ್ಥಗಳು, ದೇವಮಂದಿರಗಳು ಗಂಗಾಸ್ನಾನದ ಹದಿನಾರನೇ ಒಂದು ಭಾಗದಷ್ಟು ಪುಣ್ಯದಾಯಕವಲ್ಲ.

ಯತ್ರ ಸ್ನಾತ್ವಾ ಮಹಾತ್ಮಾನಃ ಪಿತೃಮಾತೃಕುಲಾನಿ ಚ ।
ಸಹಸ್ರಾಣಿ ಸಮುದ್ಧೃತ್ಯ ವಿಷ್ಣುಲೋಕೇ ವ್ರಜಂತಿ ತೇ ॥

ಗಂಗಾಸ್ನಾನ (ಪ್ರಯಾಗದಲ್ಲಿ)ವನ್ನು ಗೈದ ಮಹಾತ್ಮರು ತಮ್ಮ ತಂದೆ ತಾಯಿಯ ಕುಲವನ್ನುದ್ಧರಿಸುವರು ಹಾಗೂ ವಿಷ್ಣುಲೋಕಕ್ಕೆ ಹೋಗುವರು.

ಕದಾ ಯಾಸ್ಯಾಮ್ಯಹಂ ಗಂಗಾಂ ಕದಾ ಪಶ್ಯಾಮಿ ತಾಮಹಮ್ ।
ಅನುತಾಪೀ ತಯಾ ನಿತ್ಯಂ ಸ ವಿಷ್ಣು ಪದಮಶ್ನುತೇ ॥

ಗಂಗೆಯನ್ನು ಯಾವಾಗ ನೋಡುವೆನು, ಯಾವಾಗ ಹೋಗುವೆನು ಎಂದು ನಿತ್ಯವೂ ಹಂಬಲಿಸುವವನು ವಿಷ್ಣುಲೋಕಕ್ಕೆ ಹೋಗುತ್ತಾನೆ.

ಒಂದು ಪಾದದಿಂದ ಭೂಮಿಯನ್ನು ಅಳೆದ ಮೇಲೆ, ಮೇಲಿನ ಲೋಕಗಳನ್ನು ಅಳೆಯಬೇಕೆಂದು ತನ್ನ ಎರಡನೇ ಪಾದವನ್ನು ಎತ್ತಲು ಅದು ಸತ್ಯಲೋಕವನ್ನು ಮುಟ್ಟಿತು. ಪಾದಾಂಗುಷ್ಠದಿಂದ ಆದ ಘಾತದಿಂದ ಬ್ರಹ್ಮಾಂಡಖರ್ಪರವು ಸೀಳಿತು. ಹಾಗೇ ಆದ ಛಿದ್ರದಿಂದ ಚಿನ್ಮಯಧಾರೆಯು ಒಮ್ಮೆಲೇ ಉದ್ಭವಿಸಿತು. ಅದು ಪರಮಾತ್ಮನ ಪಾದಕಮಲಗಳನ್ನು ತೊಳೆದು ಕೆಳಗಿನ ಲೋಕಕ್ಕೆ ಇಳಿಯತೊಡಗಿತು. ಬ್ರಹ್ಮದೇವರು ಇದನ್ನು ನೋಡಿ ಆಶ್ಚರ್ಯಗೊಂಡು ಆ ಜಲವನ್ನು ತನ್ನ ಕಮಂಡಲದಲ್ಲಿ ಹಿಡಿದು ಪೂಜಿಸಿದರು. ತ್ರಿವಿಕ್ರಮನ ಪಾದದಿಂದ ಹರಿದು ಬಂದು ಶಿವನ ಜಟೆಯನ್ನಲಂಕರಿಸಿತು. **''ಲೋಕತ್ರಯಂ ಭಗವತೋ ವಿಶದೇವ ಕೀರ್ತಿಃ। ಮಂದಾಕಿನೀತಿದಿವಿ ಭೋಗವತೀತಿಚಾಧೋ''** ಸ್ವರ್ಗದಲ್ಲಿ ಮಂದಾಕಿನಿ, ಪಾತಾಳದಲ್ಲಿ ಭೋಗವಂತಿ ಮತ್ತು ಭೂಲೋಕದಲ್ಲಿ ಗಂಗೆಯೆಂದು ಪ್ರಸಿದ್ಧಳಾದಳು. ಭಗೀರಥನ ತಪಸ್ಸಿನ ಫಲವಾಗಿ ಭೂಲೋಕಕ್ಕೆ ಹರಿದುಬಂದು, ಗಂಗಾದೇವಿಯು ಅವನ ಚಿಕ್ಕಪ್ಪಂದಿರನ್ನು ಅವರ ಬೂದಿಯ ರಾಶಿಯ ಮೇಲೆ ಪ್ರವಹಿಸಿ ಸದ್ಗತಿಯನ್ನು ಇತ್ತಳು. ಇಂಥ ಮಹಾಮಹಿಮಳಾದ ಗಂಗಾದೇವಿಯನ್ನು ಸಾಕ್ಷಾತ್ಕರಿಸಿಕೊಂಡವರು ದ್ವೈತ ಸಾಮ್ರಾಜ್ಯಪ್ರತಿಷ್ಠಾಪನಾಚಾರ್ಯರಾದ ಶ್ರೀಮದಾನಂದತೀರ್ಥರು ಹಾಗೂ ಮೂಲಮಠವಾದ ಶ್ರೀ ಹಂಸನಾಮಕ ಪರಮಾತ್ಮನಿಂದ ಅಂಕುರಿಸಿದ ಶ್ರೀಮದುತ್ತರಾದಿಮಠದಲ್ಲಿ ವಿರಾಜಮಾನರಾದ ಯತಿವರೇಣ್ಯರಾದ ಶ್ರೀ ಸತ್ಯಬೋಧರು ಅವರ ವಿದ್ಯಾಶಿಷ್ಯರುಗಳು–ನಂತರ, ಆ ಮಠವನ್ನು ಅಲಂಕರಿಸಿದ ಶ್ರೀ ಸತ್ಯಸಂಧರು, ಶ್ರೀ ಸತ್ಯಧರ್ಮರು ಹಾಗೂ ಶ್ರೀ ಸತ್ಯಸಂಕಲ್ಪರು.

ಪೂರ್ಣಪ್ರಜ್ಞರು ಆಶ್ರಮವನ್ನು ಹೊಂದಿದ ತರುವಾಯ ಗಂಗಾಸ್ನಾನ ಮಾಡಬೇಕೆಂಬ ಇಚ್ಛೆಯುಂಟಾಗಲು ಅವರ ಗುರುಗಳಾದ ಶ್ರೀ ಅಚ್ಯುತಪ್ರೇಕ್ಷರು ತಮ್ಮ ಶಿಷ್ಯನನ್ನು ಬದರಿಯಾತ್ರೆಯನ್ನು ಮುಂದೆ ಹಾಕುವಂತೆ ಹೇಳಿದರು. ಅಲ್ಲದೇ, ಶ್ರೀಮದಾನಂತಾಸನನನ್ನು ಹೇಗಾದರೂ ತಮ್ಮ ಶಿಷ್ಯನ ಯಾತ್ರೆಯನ್ನು ಮುಂದೆ ಹಾಕುವಂತಾಗಲಿ ಎಂದು ಪ್ರಾರ್ಥಿಸಿದರು. ಅಲ್ಲಿ ಸೇರಿದ್ದ ಭಕ್ತರಲ್ಲಿ ಒಬ್ಬನು ಆವೇಶಗೊಂಡವನಾಗಿ ಶ್ರೀಹರಿಯ ಆದೇಶದಂತೆ, ಪೂರ್ಣಪ್ರಜ್ಞರೇ, ಇಂದಿನಿಂದ ಮೂರನೇ ದಿನದಂದು ಸುರನದಿಯಾದ ಗಂಗೆಯು ಈ ಸರೋವರಕ್ಕೆ ಬರುವಳು. ನೀವೇನು, ಗಂಗಾಸ್ನಾನಕ್ಕೇನು, ಹೋಗಬೇಕಾಗಿಲ್ಲವೆಂದು ನುಡಿದನು.

ಇತಸ್ತೃತೀಯೇ ದಿವಸೇ ದ್ಯುನಿಮ್ನಗಾ
ತ್ವದರ್ಥಮಾಸ್ಮಾಕ ತಟಾಕಮಾವ್ರಜೇತ್ ।

ಅತೋ ನ ಯಾಽಯಾ ಇತಿ ತಂ ತದಾಽವದತ್
ಪ್ರವಿಶ್ಯಕಿಂಚಿತ್ಕರುಣಾ ಕರೋ ಹರಿಃ || (ಸು.ಮ.ವಿ. 4ನೇ ಸರ್ಗ)

ಅದರಂತೆ, ಈಗ ಮಧ್ವ ಸರೋವರವೆಂದು ಹೆಸರಾಗಿರುವ ಕೊಳದಲ್ಲಿ ಗಂಗಾ ಸನ್ನಿಧಾನವುಂಟಾಯಿತು. ಪೂರ್ಣಪ್ರಜ್ಞರು ಹಾಗೂ ಎಲ್ಲಾ ಭಕ್ತಾದಿಗಳು ಗಂಗಾಸ್ನಾನ ಮಾಡಿದರು. ಪೂರ್ಣಪ್ರಜ್ಞರ ಅನುಗ್ರಹದಿಂದ ಇವತ್ತಿಗೂ ಹನ್ನೆರಡು ವರ್ಷಕ್ಕೊಮ್ಮೆ ಗಂಗಾಸನ್ನಿಧಾನವು ಮಧ್ವ ಸರೋವರದಲ್ಲಿ ವ್ಯಕ್ತವಾಗುವುದು. ಶ್ರೀಕೃಷ್ಣನ ಮಹಾಕಲಶಾಭಿಷೇಕಕ್ಕೂ ಇಲ್ಲಿಯ ನೀರನ್ನುಪಯೋಗಿಸುವರು. ಅದಮಾರು ಮಠದ ಶ್ರೀ ವಿಬುಧಪ್ರಿಯತೀರ್ಥರ ಮೂರನೇ ಪರ್ಯಾಯಕಾಲದಲ್ಲಿ ಗಂಗಾಸನ್ನಿಧಾನ ವುಂಟಾಯಿತು. ಆಗ ಶ್ರೀಮಧ್ವ ಸರೋವರದ ನೈಋತ್ಯ ದಿಕ್ಕಿನಲ್ಲಿ ಗಂಗೆಯ ಪ್ರತಿಮೆ ಯನ್ನು ಪ್ರತಿಷ್ಠಾಪನೆ ಮಾಡಿ ನಿರಂತರ ಪೂಜೆಗೆ ಏರ್ಪಾಡು ಮಾಡಿದರು. ದೀನರ ಮೇಲೆ ದಯೆ ತೋರಿ ಇಷ್ಟಾರ್ಥಪ್ರದಾಯಕಳಾದ ಗಂಗಾದೇವಿಯು ಶ್ರೀ ಮಹಾವಿಷ್ಣುವಿನ ಪಾದಕಮಲವನ್ನು ಬ್ರಹ್ಮದೇವರು ತೊಳೆದಾಗ ಹುಟ್ಟಿದುದರಿಂದ 'ವಿಷ್ಣುಪದೀ' ಎಂಬ ಹೆಸರಿನಿಂದ ಕರೆಸಿಕೊಳ್ಳುತ್ತಾಳೆ. ಅಂಥಹ ಗಂಗಾದೇವಿಯು ಪೂರ್ಣಪ್ರಜ್ಞರಿಗೆ ಪ್ರತ್ಯಕ್ಷಳಾಗಿ ಅವರ ಗುರುಗಳ ಮತ್ತು ಭಕ್ತಜನ ಸಮೂಹಕ್ಕೆ ಅವರಿದ್ದಲ್ಲಿಯೇ ಬಂದು ಅನುಗ್ರಹಿಸಿದ್ದು ಒಂದು ವಿಶೇಷ.

ಶ್ರೀಮದಾಚಾರ್ಯರು ತಾವು ಬಾಲಕರಾಗಿದ್ದಾಗ ಮಾಡಿದ ಕಂದುಕ ಸ್ತುತಿಯಲ್ಲಿ ಗಂಗೋದ್ಭವವನ್ನು ಶ್ರೀಕೃಷ್ಣನನ್ನು ಸ್ತುತಿಸುವಾಗ ಈ ರೀತಿ ಹೇಳಿದ್ದಾರೆ :

ಅಂಬರಗಂಗಾಚುಂಬಿತಪಾದಃ ಪದತಲವಿದಲಿತ ಗುರುತರ ಶಕಟಃ |
ಕಾಲಿಯ ನಾಗಕ್ಷ್ವೇಲನಿಹಂತಾ ಸರಸಿಜ ನವದಲ ವಿಕಸಿತ ನಯನಃ ||1||

ಶ್ರೀಮನ್ನಾರಾಯಣನು ವಾಮನಾವತಾರದಲ್ಲಿ ಬಲಿಯ ಬಳಿ ಮೂರು ಪಾದಗಳಷ್ಟು ಭೂಮಿಯನ್ನು ಬೇಡಿದನು. ಹಾಗೇ ಕೇಳಿ, ವಾಮನರೂಪಿಯಾದ ಪರಮಾತ್ಮನು ಒಂದು ಪಾದದಿಂದ ಭೂಮಂಡಲವನ್ನು, ಇನ್ನೊಂದು ಪಾದದಿಂದ ಇಡೀ ಆಕಾಶವನ್ನು ಅಳೆದನು. ಹಾಗೆ ಮಾಡಿದಾಗ ಬ್ರಹ್ಮಾಂಡ ಭಾಂಡಕಟಾಹವು ಒಡೆದು ಗಂಗೆಯುದ್ಭವವಾಗಿ ಅವನ ಪಾದವನ್ನು ತೊಳೆಯಿತು. ಅದನ್ನು 'ಅಂಬರ ಗಂಗಾಚುಂಬಿತ ಪಾದ'ವೆಂದು ವರ್ಣಿಸಿದ್ದಾರೆ. ಅಲ್ಲದೇ, ಅಂಥಹ ಸ್ವಾಮಿಯು ನಮ್ಮನ್ನು ರಕ್ಷಿಸಲಿ ಎಂದಿದ್ದಾರೆ. ಶ್ರೀ ಗಂಗಾದೇವಿಯನ್ನು ಪೂರ್ಣಪ್ರಜ್ಞರ ಪರಂಪರೆಯಲ್ಲಿ ಬಂದ ಶ್ರೀ ಸತ್ಯಬೋಧರು, ಶ್ರೀ ಸತ್ಯಸಂಧರು, ಶ್ರೀ ಸತ್ಯವರ ತೀರ್ಥರ ಕರಕಮಲಸಂಜಾತರಾದ ಶ್ರೀ ಸತ್ಯಧರ್ಮರು ಹಾಗೂ ಶ್ರೀ ಸತ್ಯಸಂಕಲ್ಪರು ಪ್ರತ್ಯಕ್ಷಿಸಿಕೊಂಡ ಯತಿವರೇಣ್ಯರು ಅಲ್ಲದೇ ಶ್ರೀಮದುತ್ತರಾದಿ ಮಠದ ಪೀಠದಲ್ಲಿ ಕಂಗೊಳಿಸಿದ ಹದಿನೈದನೆಯವರಾದ ಶ್ರೀ ವೇದವ್ಯಾಸತೀರ್ಥರ ಶಿಷ್ಯರಾದ ಶ್ರೀ ಕೃಷ್ಣ

ದ್ವೈಪಾಯನತೀರ್ಥರು ಮತ್ತೊಬ್ಬ ಯತಿವರೇಣ್ಯರು ಗಂಗಾದೇವಿಯನ್ನು ಸಾಕ್ಷಾತ್ಕರಿಸಿಕೊಂಡವರು.

ಶ್ರೀ ಸತ್ಯಬೋಧರ ಜೀವನ ಹಾಗೂ ಅವರ ಸಾಧನೆಗಳನ್ನು ತಿಳಿಸುವ ಮೂರು ಸಂಸ್ಕೃತ ಕಾವ್ಯಗಳಿವೆ. ಒಂದು ಶ್ರೀ ಸತ್ಯಬೋಧ ವಿಜಯ, ಎರಡು ಶ್ರೀ ಪೂರ್ಣಭೋದ ಗುರುವಂಶ ಕಲ್ಪತರು, ಮೂರು ಶ್ರೀ ಗುರುವಂಶಾವಲೀ. ಶ್ರೀ ಸತ್ಯಭೋದ ಗುರುಗಳು ಸುಮಾರು ನಲವತ್ತು ವರ್ಷಕ್ಕೂ ಹೆಚ್ಚು ಕಾಲ (1664ರಿಂದ 1705) ಶ್ರೀಮದುತ್ತರಾದಿ ಮಠದ ಪೀಠವನ್ನಲಂಕರಿಸಿದ್ದರು. ಇವರ ಕಾಲದಲ್ಲಿ ಮಧ್ವಮತದ ಹಿರಿಮೆ ಜನರಿಗೆ ಅರಿವಾಯಿತು. ಮೂರು ಮಠಗಳ ಸೌಹಾರ್ದತೆ ನೆಲಸಿತ್ತು. ಇವರ ಕಾಲವನ್ನು ಮಾಧ್ವರ ಸ್ವರ್ಣಯುಗವೆಂದು ಹೇಳಿದರೆ ಅತಿಶಯೋಕ್ತಿಯೇನಾಗಲಾರದು. ಹರಿಕಥಾಮೃತಸಾರದ ಕರ್ತೃಗಳಾದ ಶ್ರೀ ಜಗನ್ನಾಥದಾಸರು, ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು ಇವರೆಲ್ಲಾ ಶ್ರೀ ಸತ್ಯಬೋಧ ಸ್ವಾಮಿಗಳ ಸಮಕಾಲೀನರು. ಅಲ್ಲದೇ ಶ್ರೀ ಜಗನ್ನಾಥದಾಸರು ಹರಿಕಥಾಮೃತಸಾರದ ಬಹಳಷ್ಟು ಭಾಗವನ್ನು ಶ್ರೀ ಸತ್ಯಬೋಧರಿದ್ದ ಸವಣೂರಿ ನಲ್ಲಿಯೇ ರಚಿಸಿದರಂತೆ. ವ್ಯಾಸ ಹಾಗೂ ದಾಸಸಾಹಿತ್ಯಕ್ಕೆ ಬೆನ್ನೆಲುಬಾಗಿದ್ದರೆಂದರೆ ಹೆಚ್ಚೇನಿಲ್ಲ. ಇವರು ಆರ್ಥಿಕ ಜನ ಚಿಂತಾಮಣಿ, 'ಸತ್ಕರುಣಿ'. ಇವರ ಮಹಿಮೆಯನ್ನು

"ಮರುತಮತಾಬ್ಧಿಚಂದಿರ ಚಾರುಚರಿತ ಭೂಸುರಸನ್ನುತನೇ
ಪರಮಪುರುಷ ಕರ್ತೃ ಜಗನ್ನಾಥವಿಠಲನೇ ಅವರ ಪರಿಪರಿ
ಮಹಿಮೆಗಳ ಬಲ್ಲ"

ಎಂದು ಶ್ರೀ ಜಗನ್ನಾಥದಾಸರು ಹಾಡಿ ಕೊಂಡಾಡಿದ್ದಾರೆ. ಅವರ ಮಹಿಮಾ ವಿಶೇಷಗಳು ಅಗಣಿತ. ಲೌಕಿಕ, ವ್ಯವಹಾರ, ವಿದ್ವತ್ಪ್ರೇಮ ಅಪಾರ. ಬಡತನದಲ್ಲಿ ಹುಟ್ಟಿದರೂ ಆಧ್ಯಾತ್ಮಿಕ ಹಾಗೂ ಪ್ರಾಚೀನ ಪರಂಪರೆಯನ್ನು ಹೊಂದಿದ ಶ್ರೀಮದುತ್ತರಾದಿ ಮಠದ ಸಂಪತ್ತು ಮತ್ತು ಕೀರ್ತಿಧ್ವಜವನ್ನು ದಿಗ್‌ದಿಗಂತಕ್ಕೆ ಹಾರಿಸಿದ ಮಹಾಮಹಿಮರು. ಜೇಮ್ಸ್ ಎಂ. ಕ್ಯಾಪ್‌ಬಿಲ್, ಬಾಂಬೆ ಗೆಜಟೀಯರ್, ಕರ್ನಾಟಕ–ಧಾರವಾಡ ಡಿಸ್ಟ್ರಿಕ್ಟ್, ಚಾಪ್ಟರ್ 111, ಪುಟ 58–59 1863ಗಳಲ್ಲಿ ಈ ರೀತಿ ಸತ್ಯಬೋಧರ ಬಗ್ಗೆ ಬರೆದಿದ್ದಾನೆ;

"............... During the rule of thirty eight years Sathyabodha Thirtha travelled all over India and was respected by all the princes of the time. He was learned and holy and performed such great austerities that the people were afraid to approach him, lest he should dis-

cover their hidden sins. At the same time he was most generous and popular and is held next in order of merit to Jayarayacharya or third to the great Sarvagna. His name is so much revered that the chief branch of the Vaishnava sect, to which more than two thirds of the Vaishnava people belong, is still known as Sathyabodha's sect. In his time the religious house called 'Uttaradi mutt' at Savanur and subsequently after his name called Sathyabodha Swamiji's Mutt".

ಶ್ರೀ ಸತ್ಯಬೋಧರು ಶ್ರೀ ಹರಿಯಾಚಾರ್ಯರು ಮತ್ತು ಶ್ರೀಮತಿ ಅರಳೀಬಾಯಿ ದಂಪತಿಗಳ ಏಳು ಮಕ್ಕಳಲ್ಲಿ ಆರನೇಯವರಾಗಿದ್ದರು. ಆಶ್ರಮ ಪೂರ್ವದಲ್ಲಿ ರಾಮಾಚಾರ್ಯರೆಂದು ಹೆಸರು. ಅವರು ತಮ್ಮ ತಂದೆಯವರಲ್ಲಿ ವಿದ್ಯಾಭ್ಯಾಸವನ್ನು ಪ್ರಾರಂಭಿಸಿ ಮುಂದೆ ಶ್ರೀ ಉತ್ತರಾದಿ ಮಠಾಧೀಶರಾಗಿದ್ದ ಶ್ರೀ ಸತ್ಯಪ್ರಿಯರಲ್ಲಿ ಮುಂದುವರೆಸಿದರು. ಮಹಾಸ್ವಾಮಿಗಳು 'ಪ್ರಮಾಣಪದ್ಧತಿ'ಯಿಂದ ಪ್ರಾರಂಭಿಸಿ ಶ್ರೀರಾಮಚಾರ್ಯರನ್ನು ವಿದ್ವತ್ ಶ್ರೇಷ್ಠನನ್ನಾಗಿ ಮಾಡಿ ಸಂಚಾರ ಕಾಲದಲ್ಲಿ ತಮ್ಮ ಸಂಗಡವೇ ಕರೆದುಕೊಂಡು ಹೋಗಿ ಸರ್ವಜ್ಞ ಶಾಸ್ತ್ರದಲ್ಲಿ ಪ್ರಕಾಂಡ ಪಂಡಿತರನ್ನಾಗಿ ಮಾಡಿದರು. ಒಮ್ಮೆ ಶ್ರೀಮಠದಲ್ಲಿ ಘನವಿದ್ವಾಂಸರಾಗಿದ್ದ ಪಾಂಡುರಂಗೀ ಆಚಾರ್ಯರು ಪೂಜೆ ಮಾಡುತ್ತಲಿರುವಾಗ ಅವರ ಸಮೀಪದಲ್ಲಿಯೇ ಬಡ ರಾಮಾಚಾರ್ಯರು ಶಾಲಿಗ್ರಾಮ ಹಾಗೂ ಸಣ್ಣ ಶಂಖವನ್ನಿಟ್ಟುಕೊಂಡು ಪೂಜೆಗೆ ಕುಳಿತು ಮುಸುಕು ಹಾಕಿಕೊಂಡು ಜಪವನ್ನು ಮಾಡುತ್ತಲಿದ್ದರು. ಆಚಾರ್ಯರು, ಈ ಬಡ ಶ್ರೀರಾಮಾಚಾರ್ಯನು ಏನು ಮಾಡುತ್ತಿದ್ದಾನೆಂದು ತಿರುಗಿ ನೋಡಲು, ಅವರು ಭಯಂಕರವಾದ **ಶ್ರೀ ಶ್ವೇತವರಾಹ**ವನ್ನು ಕಂಡರು. ಅಷ್ಟರಲ್ಲಿ, ರಾಮಾಚಾರ್ಯರು ತಮ್ಮ ಮುಸುಕನ್ನು ತೆಗೆಯಲು ಆ ವರಾಹವು ಕಾಣದಾಯಿತು. ಆಶ್ರಮಪೂರ್ವದಲ್ಲಿಯೇ ಇಂಥಹ ಮಹಿಮೆಯನ್ನು ತೋರಿದವರು. ಮುಂದೆ, ಶ್ರೀ ಸತ್ಯಪ್ರಿಯತೀರ್ಥರಿಂದ ತುರೀಯಾಶ್ರಮವನ್ನು ಪಡೆದು ಶ್ರೀ ಸತ್ಯಬೋಧರೆನಿಸಿದರು. ಇವರು ಮಾರ್ಕಂಡೇಯಾಂಶರೆಂದು ಪ್ರಖ್ಯಾತರಾಗಿದ್ದಾರೆ (ಪುಟ 80—ಸತ್ಕಥಾ). ಶ್ರೀ ಸತ್ಯಪ್ರಿಯರು ತಮ್ಮ ಶಿಷ್ಯ ಶ್ರೀರಾಮಾಚಾರ್ಯರು ವಿದ್ಯೆಯಲ್ಲಿ, ವಿನಯದಲ್ಲಿ, ಸಾಮರ್ಥ್ಯಗಳಲ್ಲಿ ಶ್ರೇಷ್ಠರೆಂದು ಪರಿಗಣಿಸಿ ತುರೀಯಾಶ್ರಮವನ್ನಿತ್ತರೆಂಬುದನ್ನು ಶ್ರೀ ಕಂಚಿ ಕೃಷ್ಣಸೂರಿಗಳು ತಮ್ಮ ಶ್ರೀ ಸತ್ಯಬೋಧವಿಜಯದಲ್ಲಿ ಹೇಳಿದ್ದಾರೆ.

''ಈ ಸಂಸ್ಥಾನಕ್ಕೆ ನಾನು ಅಸಮರ್ಥನು, ಹೇಗೆ ರಕ್ಷಿಸಲಿ ಎಂದು ನಿಮಗೆ ಸಂದೇಹ ಬಂದರೆ, ನೀವು ಜ್ಞಾಪಕವಿಡಿ, ನನ್ನಿಂದ

(ಶ್ರೀ ಸತ್ಯಪ್ರಿಯರಿಂದ) ಹಿಡಿದು ಚತುರ್ಮುಖ ಬ್ರಹ್ಮದೇವರವರಿಗೆ ನಿಮ್ಮ ಬೆಂಬಲಕ್ಕೆ ಇದ್ದಾರೆ. ಮಿಗಿಲಾಗಿ ಶ್ರೀ ಮೂಲರಾಮ ದೇವರು, ಶ್ರೀ ಸೀತಾದೇವಿಯರ ಅನುಗ್ರಹವಿದೆ. ಅವರ ಕೃಪೆಯಿಂದ ಸಂಸ್ಥಾನವನ್ನು ನಿರ್ಭೀತರಾಗಿ ನಡೆಸುವಿರಿ''.

ಶ್ರೀಪೀಠದಲ್ಲಿ ವಿರಾಜಮಾನರಾಗಿದ್ದ ಗುರುಗಳ ಉತ್ಕರ್ಷವನ್ನು ಸಹಿಸಲಾರದ ಕೆಲವರು ಒಮ್ಮೆ ನೈವೇದ್ಯದಲ್ಲಿ ವಿಷಪ್ರಯೋಗವನ್ನು ಪಾಚಕನೊಬ್ಬನ ಕೈಯಲ್ಲಿ ಮಾಡಿಸಿದಾಗ ದಿನನಿತ್ಯದಂತೆ ಗುರುಗಳು ಶ್ರೀ ಮೂಲರಾಮದೇವರಿಗೆ ಅರ್ಪಿಸಿದರು. ಶ್ರೀಮೂಲರಾಮನ ಕಂಠವು ಕಪ್ಪಾಯಿತು. ಆಗ, ಆ ಪಾಚಕನು ಭಯಭೀತನಾಗಿ ದೇವರ ನೈವೇದ್ಯದಲ್ಲಿ ವಿಷವನ್ನು ಹಾಕಿದ್ದುದಾಗಿ ಹೇಳಿ, ಸ್ವಾಮಿಗಳು ಅದನ್ನು ಭುಂಜಿಸಬಾರದೆಂದು ಬೇಡಿಕೊಂಡನು. ಮಠದ ಎಲ್ಲಾ ಸಿಬ್ಬಂದಿ ಹಾಗೂ ಪಂಡಿತರು, ಭಕ್ತರು ವಿಷಪೂರಿತವಾದ ನೈವೇದ್ಯವನ್ನು ತಿನ್ನಬಾರದೆಂದು ಪರಿಪರಿಯಾಗಿ ಹೇಳಿದರೂ, ಸ್ವಾಮಿಗಳು ಶ್ರೀ ಮೂಲರಾಮನಿಗೆ ಅರ್ಪಿಸಿದ ನೈವೇದ್ಯವನ್ನು ತಾವು ಭುಂಜಿಸುವುದಾಗಿ ಹೇಳಿ ಭುಂಜಿಸಿದರು. ಆ ಮೂಲರಾಮನೇ ಕಾಪಾಡುವನೆಂದರು. ಕೆಲವು ದಿನಗಳು ವಿಷಪ್ರಾಶನವು ಅವರನ್ನು ಕೃಶನನ್ನಾಗಿ ಮಾಡಿತು. ಆಗ್ಗೆ, ಅವರ ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದ ಆಯುರ್ವೇದ ವೈದ್ಯರು ಪ್ರಾಣಾಪಾಯವಿಲ್ಲವು ಆದರೆ, ವಿಷದ ಪರಿಣಾಮವು ಆಗದಂತೆ ಇರಲು ಸ್ವಾಮಿಗಳು ರಾತ್ರಿ ಊಟ ಮಾಡಿ ಹಗಲು ನಿದ್ರಿಸಬೇಕೆಂದು ಹೇಳಿದರು. ಅದರಂತೆ, ಶ್ರೀಗಳು ರಾತ್ರಿ, ದೇವರ ಪೂಜೆ ಮಾಡಿ ನೈವೇದ್ಯವನ್ನು ಸ್ವೀಕರಿಸುವುದನ್ನು ಕೆಲವರು ರಾತ್ರಿ ಊಟ ಸನ್ಯಾಸಿಗಳು ಮಾಡುವುದು ಶಾಸ್ತ್ರರೀತ್ಯ ಸರಿಯಲ್ಲವೆಂದು ಟೀಕೆ ಮಾಡಿದರು. ಆಗ ಒಂದು ರಾತ್ರಿ, ಪೂಜೆ ಮಾಡಿದ ನಂತರ ಆ ಕುಹಕಿಗಳನ್ನು ಕರೆದು ಹೊರಗೆ ಹೋಗಿ ಆಕಾಶವನ್ನು ವೀಕ್ಷಿಸಲು ಹೇಳಿದರು. ಮಧ್ಯರಾತ್ರಿಯಲ್ಲಿ ಅವರು ನೋಡಲು ಆಕಾಶದಲ್ಲಿ ಪ್ರಖರ ಕಿರಣಗಳಿಂದ ಸೂರ್ಯನು ಪ್ರಕಾಶಿಸುವುದನ್ನು ನೋಡಿ ಆ ಕುಹಕಿಗಳ ಮುಖಕ್ಕೆ ಮಸಿ ಬಳಿದಂತಾಗಿ ಸ್ವಾಮಿಗಳ ಪಾದಕ್ಕೆರಗಿ ತಮ್ಮನ್ನು ಕ್ಷಮಿಸಿ ಕಾಪಾಡಬೇಕೆಂದು ಕೇಳಿದರು.

ಒಮ್ಮೆ ಮುಸ್ಲಿಂ ಸರದಾರನು ಗುರುಗಳಲ್ಲಿ ಬಂದು ತಾನು ಕಟ್ಟಿದ ಮನೆಯಲ್ಲಿ ಒಂದು ಹಾವು ಬಂದು ಸೇರಿಕೊಂಡಿದೆಯೆಂದು ಏನೇ ಮಾಡಿದರು ಹೋಗುತ್ತಿಲ್ಲವೆಂದು, ಕೃಪೆ ಮಾಡಿ ಅದರ ಕಾಟವನ್ನು ತಪ್ಪಿಸಬೇಕೆಂದು ಬೇಡಿಕೊಂಡನು. ಗುರುಗಳು ಅವನ ಮನೆಯಲ್ಲಿ ಶ್ರೀ ಮೂಲರಾಮರ ಪೂಜೆ ಮಾಡಿ, ಒಂದು ಬಟ್ಟಲು ಹಾಲನ್ನಿಟ್ಟರು. ಆಗ ಆ ಸರ್ಪವು ಕುಡಿದು ಮತ್ತೆ ಎರಡು ದಿನಗಳ ಮೇಲೆ ಪೂಜಾ ಸಮಯಕ್ಕೆ ಬಂದಿತು. ಆಗ ಅಲ್ಲಿದ್ದ ಒಬ್ಬ ಬ್ರಾಹ್ಮಣನು ಆವೇಶಗೊಂಡು ಆ

ನಾಗರಾಜನ ಕೋರಿಕೆಯನ್ನು ಹೇಳಿದನು. ಎಲ್ಲಿ ಆ ನಾಗರಾಜನು ಪ್ರಾಣ ಬಿಡುವನೋ ಅಲ್ಲಿ ಅಪಾರ ಧನವಿದೆ ಎಂತಲೂ ಅರ್ಧಭಾಗವು ಮಠಕ್ಕೆ ಸೇರಬೇಕೆಂದು ಉಳಿದರ್ಧದಲ್ಲಿ ಅರ್ಧವನ್ನು ಬ್ರಾಹ್ಮಣರಿಗೆ ದಾನ ಮಾಡಬೇಕೆಂತಲು, ಉಳಿದ ಹಣವು ಸರದಾರನಿಗೆ ಸೇರಬೇಕೆಂದು. ತರುವಾಯ ಆ ಸರ್ಪವು ಒಂದು ಮೂಲೆಯಲ್ಲಿ ಪ್ರಾಣಬಿಟ್ಟಿತು. ಅಲ್ಲಿ ಏಳು ಹುಂಡಿಗಳ ಬಂಗಾರದ ನಾಣ್ಯ ಸಿಕ್ಕಿತು. ಹಾಗೇ ಸಿಕ್ಕ ಬಂಗಾರದ ನಾಣ್ಯದಿಂದ ಬೆಳ್ಳಿ ಬಂಗಾರದ ನಾಣ್ಯವನ್ನು ಒಂದು ಕಡೆ ಶ್ರೀ ಸತ್ಯಬೋಧರ ಚಿತ್ರವನ್ನು ಮತ್ತೊಂದು ಕಡೆ **''ಸತ್ಯಬೋಧ ಗುರು ರಾಜ – ಗುರುರಾಜೋ ವಿಜಯತೇ''** ಎಂದು ಟಂಕಿಸಲಾಗಿತ್ತು. ಸವಣೂರನ್ನು ಟಿಪ್ಪೂ ಸುಲ್ತಾನನನ್ನು ಮುಕ್ತಿಗೆ ಹಾಕಿ ಒಂದು ಲಕ್ಷ ವರಹಗಳನ್ನು ಸಂದಾಯ ಮಾಡಬೇಕೆನಲು ಅಲ್ಲಿಯ ನವಾಬನು ಅವನ ಮುಖ್ಯಮಂತ್ರಿ ಖಂಡೇರಾಯನ ಕೈಯಲ್ಲಿ ಶ್ರೀಗಳವರ ಬಳಿ ಪರಿಸ್ಥಿತಿಯನ್ನು ವಿವರಿಸಿ ಹಣವನ್ನು ತರಲು ಕಳುಹಿಸಿದಾಗ ಶ್ರೀಗಳವರು ತಾವು ಟಂಕಿಸಿದ್ದ ನಾಣ್ಯಗಳನ್ನು ಕಳುಹಿಸಿಕೊಟ್ಟರು. ಸುಲ್ತಾನನು ಗುರುಗಳ ಚಿತ್ರವನ್ನುಳ್ಳ ನಾಣ್ಯವನ್ನು ನೋಡಿ ಪುನಃ ಹಿಂದಿರುಗಿಸಿದನು.

ಶ್ರೀ ಸತ್ಯಬೋಧರು ಒಮ್ಮೆ ಹರಿಹರದಲ್ಲಿದ್ದಾಗ ಇವರಿಂದ ಉಪಕಾರವನ್ನು ಹೊಂದಿದ್ದ ಶ್ರೀ ಖಂಡೇರಾಯನು ತನ್ನ ಮಗ ತಿಮ್ಮಪ್ಪನನ್ನು ಶ್ರೀಗಳಲ್ಲಿ ಕಳುಹಿಸಿ ಸವಣೂರಿಗೆ ಬರಬೇಕೆಂದು ಪ್ರಾರ್ಥಿಸಿದನು. ಶ್ರೀಗಳವರು ಗಂಗಾಸಾನ್ನಿಧ್ಯವುಳ್ಳ ತುಂಗೆಯನ್ನು ಬಿಟ್ಟು ಹೋಗುವುದು ಹೇಗೆಂದು ಯೋಚಿಸುತ್ತಿರಲು, ಸೌಭಾಗ್ಯವತಿಯೊಬ್ಬಳು ಸ್ವಪ್ನದಲ್ಲಿ ಕಾಣಿಸಿಕೊಂಡು ಕಾರ್ತೀಕ ಮಾಸದಲ್ಲಿ ಸವಣೂರಿನಲ್ಲಿ ನೀವು ಯಾವ ಬಾವಿಗೆ ಸ್ನಾನಕ್ಕೆ ಹೋಗುವಿರೋ ಆ ಬಾವಿಗೆ ಹತ್ತಿರವಿರುವ ಹತ್ತಿಯ ಗಿಡದಿಂದ ಎಲ್ಲ ಜನರ ಸಮಕ್ಷಮ ಗಂಗಾದೇವಿಯು ಉದ್ಭವಿಸಿ ಬರುವಳೆಂದೂ, ಅಲ್ಲಿಯವರೆವಿಗೂ ಖಂಡೇರಾಯನು ತುಂಗಾ ಭದ್ರೆಯ ಜಲವನ್ನು ನಿಮ್ಮ ಸ್ನಾನಕ್ಕೆ ಸದ್ಬ್ರಾಹ್ಮಣರಿಂದ ತರಿಸುವನು ಎಂದು ಹೇಳಿದಳು. ಅಂತೆಯೇ ಯತಿಪುಂಗವರಾದ ಶ್ರೀಗಳು ಸವಣೂರಿಗೆ ಹೊರಭಾಗದಲ್ಲಿದ್ದ ಒಳ್ಳೆ ನೀರಿದ್ದ ಬಾವಿಗೆ ಪಂಡಿತರೊಡಗೂಡಿ ಸ್ನಾನ ಮಾಡಲು ಬಂದು ಅಲ್ಲಿಯಿದ್ದ ಹತ್ತಿ ಗಿಡದ ಕೆಳಗೆ ನಿಂತು ಗಂಗಾದೇವಿಯನ್ನು ಸ್ತುತಿಸಲು ಹತ್ತಿ ಗಿಡದಿಂದ ಮುತ್ತಿನ ಮಾಲೆಯೋಪಾದಿಯಲ್ಲಿ ನೀರಿನ ಧಾರೆ ಸುರಿಯಿತು. ಆಗ ಸೂರ್ಯೋದಯವಾಗಿದ್ದು ಶ್ರೀಗಳು, ಪಂಡಿತರಾದಿಯಾಗಿ, ಭಕ್ತಜನರು ಗಂಗಾಸ್ನಾನ ಮಾಡಿದರು. ಅದನ್ನು ಶ್ರೀಗಳು ವಿಷ್ಣುಪಾದೋದ್ಭವೆಯಾದ ಗಂಗೆಯು ಬಂದಿದ್ದಾಳೆಂದು ಹೇಳಿ 'ವಿಷ್ಣುತೀರ್ಥ'ವೆಂದು ಕರೆದರು. ಒಮ್ಮೆ ಶ್ರೀ ಭಾಭಾಚಾರ್ಯ ರಾಯಚೂರರವರ ಪರ್ಯಾಯ ಕಾಲದಲ್ಲಿ ಶೂರ್ಪಾಲಯದಿಂದ ಬಂದ ಶ್ರೀಕೃಷ್ಣಾಚಾರ್ಯ ಗಲಗಲಿಯವರು ತಮಗೆ ಸ್ವಪ್ನದಲ್ಲಿ ಶ್ರೀಗಳವರು ತಮ್ಮ ಮಠಕ್ಕೆ ಬಾ ಗಂಗಾಸ್ನಾನ ವಾಗುತ್ತದೆಯೆಂದು ಹೇಳಿದಂತಾಯಿತೆಂದು ತುಂಬಿದ್ದ ಸಭೆಯಲ್ಲಿ

ಹೇಳಿದರಂತೆ. ಗಂಗೆಯನ್ನು ಸಾಕ್ಷಾತ್ಕರಿಸಿಕೊಂಡ ಶ್ರೀ ಸತ್ಯಬೋಧರು ದೈವಾಂಶ ಸಂಭೂತರು. ಯತಿಶ್ರೇಷ್ಠರು. ನಾಲ್ಕು ದಶವರ್ಷಗಳು ಮಹಾಸಂಸ್ಥಾನವನ್ನಾಳಿದ ಯತಿಕುಲೇಂದ್ರರು.

ದುರ್ಬುದ್ಧಿಯುಳ್ಳ ಶ್ರೀ ಗುರುರಾಜಾಚಾರ್ಯನೆಂಬುವನು ಶ್ರೀಗಳವರು ರಾಮೇಶ್ವರ ಯಾತ್ರೆಯನ್ನು ಮುಗಿಸಿಕೊಂಡು ಬರುವ ಕಾಲದಲ್ಲಿ ರಾಮನಾಥಪುರದ ದೊರೆಗಳಿಂದ ಮಾನ್ಯತೆ ಪಡೆಯಲು ಹಾಗೂ ಮಠದ ಪೀಠವನ್ನು ತಾನು ಪಡೆಯಬೇಕೆಂದು ತನಗೆ ಮಠದ ಪೀಠವನ್ನು ಕೊಡಿಸಿದರೆ ಹತ್ತು ಸಾವಿರ ವರಹ ಕೊಡುತ್ತೇನೆಂದು ಹೇಳಿದನು. ಆಗ ಪಾವರೂ ನದಿಯ ಹತ್ತಿರ ಸ್ವಾಮಿಗಳನ್ನು ಪದಚ್ಯುತಿಗೊಳಿಸಿ ಹಣವನ್ನು ದೋಚಲು ರಾಜನ ಸೈನಿಕರು ಮುಂದಾದರು. ಶ್ರೀಗಳವರು ತಮ್ಮ ಆರಾಧ್ಯದೈವನಾದ ಶ್ರೀ ಮೂಲರಾಮನನ್ನು ತದೇಕಚಿತ್ತರಾಗಿ ಧ್ಯಾನಿಸಲು ರಾಜನು ಉದರಶೂಲೆಗೊಳಗಾದನು. ಆಗ ಅವನು ಶ್ರೀಗಳಲ್ಲಿ ಶರಣಾಗತನಾಗಿ ಉದರ ಶೂಲೆಯಿಂದ ಪಾರು ಮಾಡಬೇಕೆಂದು ಬೇಡಿಕೊಳ್ಳಲು ಕರುಣಾಮೂರ್ತಿಯಾದ ಶ್ರೀಗಳು ಶ್ರೀ ಮೂಲರಾಮರಿಗೆ ಅರ್ಪಿತವಾದ ಧೂಪಾರತಿಯ ಅಂಗಾರವನ್ನು ಕೊಟ್ಟರು. ಅವನು ಅದನ್ನು ಹಚ್ಚಿಕೊಂಡ ಕೆಲವೇ ಕ್ಷಣದಲ್ಲಿಯೇ ಶೂಲೆಯು ನಿವೃತ್ತಿಯಾಯಿತು.

ಶ್ರೀಮದಾನಂದತೀರ್ಥ ಭಗವತ್ಪಾದರು ತೋರಿಸಿದ ಮಹಿಮೆಗಳನ್ನು ಅವರ ಪೀಠವನ್ನಲಂಕರಿಸಿದ ಶ್ರೀ ಸತ್ಯಬೋಧರು, ಅವರ ಪರಮಾನುಗ್ರಹದಿಂದ ಯಥಾಶಕ್ತಿಯಾಗಿ ಶ್ರೀಮದಾನಂದತೀರ್ಥರು ತೋರಿಸಿದ ಮಹಿಮೆಯು ಸ್ಮರಣೆ ಬರುವಂತೆ ಮಹಿಮೆಗಳನ್ನು ತೋರಿಸಿದ್ದಾರೆ.

1. ಶ್ರೀ ಭಗವತ್ಪಾದರು ಮಧ್ವ ಸರೋವರದಲ್ಲಿ ತಾವು ಆಶ್ರಮವನ್ನು ಸ್ವೀಕರಿಸಿದ ಆರಂಭದಲ್ಲಿಯೇ ಗಂಗೆಯನ್ನು ಪ್ರತ್ಯಕ್ಷವನ್ನು ಮಾಡಿಕೊಂಡರು ಮತ್ತು ಹಸ್ತಿನಾವತಿಯಲ್ಲಿ ಚಾತುರ್ಮಾಸಕ್ಕೆ ಕುಳಿತಾಗ ಗಂಗಾದೇವಿಯೇ ಶಾಖಾಭೇದದಿಂದ ಅವರಿದ್ದೆಡೆಗೆ ಬಂದು ಸೇವಿಸಿದಳು.

– ಶ್ರೀ ಸತ್ಯಬೋಧರು ಈಗಿರುವ ವಿಷ್ಣುತೀರ್ಥದಲ್ಲಿ ಗಂಗಾದೇವಿಯನ್ನು ಸಾಕ್ಷಾತ್ಕರಿಸಿ ಸರ್ವರಿಗೂ ಗಂಗಾಸ್ನಾನ ಮಾಡಿಸಿದರು.

2. ಶ್ರೀಮದಾನಂದತೀರ್ಥರು ದೀಪ ನಂದಿದಾಗ ಚಂದ್ರಪ್ರಕಾಶ ಮಾಡಿ ತಮ್ಮ ನಖಕಾಂತಿಯಿಂದ ಶಿಷ್ಯರಿಗೆ ಪಾಠವನ್ನು ನಡೆಸಿದರು.

– ಶ್ರೀ ಸತ್ಯಬೋಧರು ರಾತ್ರಿಯಲ್ಲಿ ಮಾರ್ತಾಂಡನನ್ನು ದರ್ಶನ ಮಾಡಿಸಿದರು.

3. ಪೂರ್ಣಬೋಧರು ನವಾಬನನ್ನು ಅವನ ತುರುಷ್ಕ ಭಾಷೆಯಲ್ಲಿ ಮಾತನಾಡಿಸಿ ರಾಜ್ಯಾರ್ಧವನ್ನು ಕೊಡುವಂತೆ ಮಾಡಿದರು.

— ಶ್ರೀಗಳವರು ಸವಣೂರಿನ ನವಾಬನಿಗೆ ರಾಜಗುರುಗಳಾಗಿ, ತಮ್ಮದೇ ಚಿತ್ರವುಳ್ಳ ನಾಣ್ಯಗಳನ್ನು ಟಂಕಿಸಿ ಚಲಾವಣೆ ಮಾಡಿಸಿದರು.

4. ಆಸೇತುಹಿಮಾಚಲವನ್ನು ಸಂಚರಿಸಿ ಪರವಾದಿಗಳನ್ನು ಸೋಲಿಸಿ ಹರಿಸರ್ವೋತ್ತಮತ್ವವನ್ನು ಶ್ರೀಮದಾಚಾರ್ಯರು ಸ್ಥಾಪಿಸಿದರು ಹಾಗೂ ದೂರ್ವಾದಿಗಳಾದ, ಬುದ್ಧಿಸಾಗರ, ಪದ್ಮಪಾದ, ಪುಂಡರೀಕಪುರಿ ಮುಂತಾದವರನ್ನು ನಿಗ್ರಹಿಸಿದರು.

— ಶ್ರೀಗಳವರು, ವಾದೀಂದ್ರ, ಸೇತುಗೋಸ್ವಾಮಿ, ಪುಣೆಯ ಅದ್ವೈತ ಶಾಸ್ತ್ರಿಗಳನ್ನು ಖಂಡಿಸಿದರು. ತಾರತಮ್ಯ ಪಂಚಭೇದಗಳನ್ನು ಪ್ರತಿಪಾದಿಸಿದರು.

5. ಶ್ರೀ ಭಗವತ್ಪಾದರು, ಬೀಜಾಂಕುರ, ಫಲ, ಪುಷ್ಪಗಳನ್ನು ಧಾನ್ಯವನ್ನು ವೇದಪ್ರಾಮಾಣ್ಯದಿಂದ ಹಾಗೂ ಔಷಧಿ ಸೂಕ್ತವನ್ನು ಹೇಳಿ ತಕ್ಷಣದಲ್ಲಿ ಬೆಳೆಸಿದರು.

— ಶ್ರೀ ಸತ್ಯಬೋಧರು ವೇದಸೂಕ್ತಗಳನ್ನು ಹೇಳಿ ಶ್ರೀ ಮೂಲರಾಮರನ್ನು ಒಲಿಸಿಕೊಂಡರು ಹಾಗೂ ಎಲ್ಲರ ಮನೆಯಲ್ಲೂ ಧಾನ್ಯ ಬೆಳೆಯುವಂತೆ ದಕ್ಷಿಣ ದೇಶದಲ್ಲಿ ಕ್ಷಾಮ ಬಂದಾಗ ಮಾಡಿದರು.

6. ಶೇಷಾಂಶರಾದ ಪದ್ಮನಾಭತೀರ್ಥರಿಗೆ ಸಂಸ್ಥಾನವನ್ನು ಶ್ರೀಮದಾನಂದ ತೀರ್ಥರು ಕೊಟ್ಟು ಅದೃಶ್ಯರಾದರೇ,

— ಶ್ರೀ ಸತ್ಯಬೋಧರು ಪ್ರಹ್ಲಾದಾಂಶರಾದ ತಪಶ್ಚಕ್ರವರ್ತಿಗಳಾದ ಶ್ರೀ ಸತ್ಯಸಂಧರಿಗೆ ಆಶ್ರಮವನ್ನು ಕೊಟ್ಟು ಬೃಂದಾವನಸ್ಥರಾದರು. ಈ ಎಲ್ಲಾ ಮಹಿಮೆ ಗಳನ್ನು ಶ್ರೀ ಸತ್ಯಬೋಧರು, ತಮ್ಮ ಮೂಲಗುರುಗಳಾದ ಶ್ರೀಮದಾನಂದತೀರ್ಥರ ಪರಮಾನುಗ್ರಹದಿಂದ ತೋರಿಸಲು ಸಾಧ್ಯವಾಗಿದೆ.

ಶ್ರೀ ಸತ್ಯಬೋಧರ ಮಹಿಮಾವಿಶೇಷವನ್ನು ನೋಡಿದರೆ ಶ್ರೀಗಳವರು ವಿಶ್ವದ ಪುರಾಣ ಪುರುಷರಲ್ಲೊಬ್ಬರೆಂದು ಹೇಳಬಹುದು, ಅಲ್ಲದೇ, ಹರಿಕಥಾಮೃತಸಾರ ವನ್ನು ಬರೆದ ಶ್ರೀ ಜಗನ್ನಾಥದಾಸರು ಶ್ರೀಗಳವರಿಗೆ ಮಂತ್ರಾಕ್ಷತೆ ತಟ್ಟೆಯನ್ನರ್ಪಿಸಿ ದರು. ಹಾಗೇ ಶ್ರೀಗಳವರು ಅನುಗ್ರಹಪೂರ್ವಕವಾಗಿ ಇತ್ತ ತಟ್ಟೆಯು ಮಾನ್ವಿಯಲ್ಲಿ ದಾಸರ ಸನ್ನಿಧಿಯಲ್ಲಿದೆ. ಸವಣೂರಿನಲ್ಲಿ ಶ್ರೀಗಳವರ ಸನ್ನಧಿಯಲ್ಲಿ ಇವತ್ತಿಗೂ ಜಗನ್ನಾಥ ದಾಸರು ಸಮರ್ಪಿಸಿದ ತಟ್ಟೆಯಿದೆ. ವ್ಯಾಸ, ದಾಸ ಸಾಹಿತ್ಯಗಳ ಸಮನ್ವಯ ವಾಗಿದ್ದುದಕ್ಕೆ ನಿದರ್ಶನವಾಗಿದೆ. ಹರಿದಾಸರ ರಚನೆಗಳು ಶ್ರೀಗಳವರ ಮಹಿಮೆಗೆ ಪ್ರಮಾಣವಾಗಿದೆ. ಶ್ರೀಗಳವರನ್ನು ನೆನಸಿದ ದಿನವೇ ಪುಣ್ಯ. 1860ರಲ್ಲಿ ವೆಂಕಟಪೇಟೆ

ಯಲ್ಲಿ ಶ್ರೀ ಸತ್ಯಪರಾಯಣತೀರ್ಥರು, ಶ್ರೀ ಸತ್ಯಬೋಧತೀರ್ಥರ ಮೃತ್ತಿಕಾ ಬೃಂದಾವನವನ್ನು ತಮ್ಮ ಅಮೃತಹಸ್ತದಿಂದ ಪ್ರತಿಷ್ಠಾಪಿಸಿದರು. ಇತ್ತೀಚೆಗೆ ಬಾಗಲಕೋಟೆ ಮುಳುಗಡೆಯ ಸಂದರ್ಭದಲ್ಲಿ ನವೆಂಬರ್ 2004ರಲ್ಲಿ ನವನಗರ ದಲ್ಲಿ **ಮಹಾಮಹಿಮರಾದ ಶ್ರೀ ಸತ್ಯಾತ್ಮರು ಅದನ್ನು ಪುನರ್ಪ್ರತಿಷ್ಠಾಪನೆ** ಮಾಡಿದ್ದಾರೆ.

ಚತುರ್ಯುಗವರ್ಮೂತಿ ಬ್ರಹ್ಮಕರಾರ್ಚಿತ ಮೂಲರಾಮದೇವರ ಪಾದ ಪದ್ಮಾರಾಧಕರಾದ ದ್ವೈತ ಸಿದ್ಧಾಂತ ಪ್ರತಿಷ್ಠಾಪನಚಾರ್ಯರಾದ ಜಗದ್ಗುರು ಶ್ರೀ ಶ್ರೀ ಮಧ್ವಾಚಾರ್ಯರ ಮೂಲಮಹಾಸಂಸ್ಥಾನ ಶ್ರೀಮದುತ್ತರಾದಿ ಮಠದ ಪೀಠವನ್ನು ಅಲಂಕರಿಸಿದ ಇಪ್ಪತ್ತೈದನೇ ಯತಿವರೇಣ್ಯರು ಶ್ರೀ ಸತ್ಯಸಂಧತೀರ್ಥರು, ಶ್ರೀ ಸತ್ಯಬೋಧ ಗುರುಗಳ ಕರಕಮಲಸಂಜಾತರು. ಅಪರೋಕ್ಷ ಜ್ಞಾನಿಗಳು, ಶಾಪಾನುಗ್ರಹಶಕ್ತರು, ವೇದವೇದಾಂತ ಪಾರಂಗತರು, ಯತಿಕುಲೋತ್ತಮರು ಹಾಗೂ ಸರ್ವಶಾಸ್ತ್ರ ಪಾರಂಗತರು. ಮಹಾನುಭಾವರ ಬೃಂದಾವನವು ಪ್ರಶಾಂತ ವಾತಾವರಣದಲ್ಲಿ ತುಂಗಾ ನದಿಯ ದಂಡೆಯ ಮೇಲೆ ಶ್ರೀ ಅಶ್ವತ್ಥ ನಾರಾಯಣನ ಸನ್ನಿಧಿಯಲ್ಲಿ ಮಹಿಷಿಯಲ್ಲಿದೆ. ಕಾಮಿತಾರ್ಥಪ್ರದಾಯಿಕರು, ದುರಿತನಿವಾರಕರು, ಅರಸಿ ಬಂದವರಿಗೆ ಅಭಯಪ್ರದಾಯಕರಾಗಿ ಕಂಗೊಳಿಸುತ್ತಿದ್ದಾರೆ. ಇವರು ಆಶ್ರಮ ಪೂರ್ವದಲ್ಲಿ ಶ್ರೀ ಸತ್ಯಬೋಧ ಸ್ವಾಮಿಗಳ ಆಶ್ರಮಪೂರ್ವದ ಪುತ್ರ ಶ್ರೀ ಸೇತು ನಾರಾಯಣಚಾರ್ಯರ ಮಗಳನ್ನು ಮದುವೆ ಮಾಡಿಕೊಂಡಿದ್ದರು. ಶ್ರೀ ಸತ್ಯಬೋಧರು ಇವರಿಗೆ ಆಶ್ರಮವಿತ್ತ ಮೇಲೆ ತಮ್ಮ ಅಪರೋಕ್ಷ ಜ್ಞಾನದಿಂದ ಇವರು ಅಲ್ಪಾಯುಷಿ ಗಳೆಂದು ತಿಳಿದು, ಇವರಿಗೆ 12 ಬಟ್ಟಲುಗಳಲ್ಲಿ ತುಪ್ಪ ತುಂಬಿಸಿ ಕುಡಿಯಲು ಹೇಳಿದರು. ಇವರಾದರೋ ಹತ್ತು ಬಟ್ಟಲು ನೀರನ್ನು ಕುಡಿದರು. ಆದ್ದರಿಂದ ಇವರಿಗೆ ಹತ್ತು ವರ್ಷಗಳ ಆಯುಷ್ಯವನ್ನು ಮಾತ್ರ ಶ್ರೀರಾಮನ ದಯೆಯಿಂದ ಹೊಂದಿರುವಿರಿ ಎಂದು ಶ್ರೀ ಸತ್ಯಬೋಧರು ಹೇಳಿದರು. ಅಲ್ಲದೇ, ನೀವು ಶ್ರೀ ಮೂಲರಾಮನ ಪೂಜೆಯನ್ನು ಕೈಗೊಳ್ಳಲು ಮತ್ತೊಂದು ಜನ್ಮವೆತ್ತಿರುವಿರಿ ಎಂದು ಹೇಳಿದ್ದು, ಶ್ರೀ ರಾಘವೇಂದ್ರಸ್ವಾಮಿಗಳೇ ಶ್ರೀ ಸತ್ಯಸಂಧರಾಗಿ ಜನ್ಮವೆತ್ತಿದ್ದಾರೆ ಎಂದು ಪ್ರತೀತಿ.

ಶ್ರೀ ಸತ್ಯಸಂಧರ ಅಪಾರ ಮಹಿಮೆಯನ್ನು 'ನವರತ್ನಮಾಲಿಕಾ' ಸ್ತೋತ್ರದಲ್ಲಿ ಕವಿಕುಲಾಗ್ರಣಿಗಳಾದ ಕೃಷ್ಣಾತೀರದ ನಿವಾಸಿಗಳು ಶ್ರೀ ಕೃಷ್ಣಚಾರ್ಯ, ಶ್ರೀಮತಿ ನರಸುಬಾಯಿಯವರ ಸಂಜಾತರಾದ ಶ್ರೀ ಆನಂದತೀರ್ಥಚಾರ್ಯರು ಒಂದೇ ಶ್ಲೋಕದಲ್ಲಿ ವರ್ಣಿಸಿದ್ದಾರೆ;

ದೃಷ್ಟಾಗಂಗಾ ಶಾತಿತಂ ದ್ವಾರಕೀಲಂ
ಉಷ್ಣಾ ಮುದ್ರಾ ಪಂಢರೀಶಸ್ಯ ದತ್ತಾ।

ಕೃಷ್ಣಃ ಸ್ಪೃಷ್ಟಃ ಶೇಷದರ್ಶೀ ಲತಾವಾನ್
ಅಷ್ಟೈಶ್ವರ್ಯಂ ಸತ್ಯಸಂಧಂ ನಮಾಮಿ ।

ಮಹಾಮಹಿಮರಾದ ಶ್ರೀ ಸತ್ಯಸಂಧರು ಪುರುಷಸೂಕ್ತವ್ಯಾಖ್ಯೆ, ವಿಷ್ಣುಸ್ತುತಿ, ಘರ್ಮಸೂಕ್ತವ್ಯಾಖ್ಯೆ, ವಿಷ್ಣುಸಹಸ್ರನಾಮ ವ್ಯಾಖ್ಯೆ, ಅಷ್ಟಾವಿಂಶತಿ ಮೂರ್ತಿ ಸ್ತುತಿ ಮುಂತಾದವುಗಳನ್ನು ರಚಿಸಿದ್ದಾರೆ. ಶ್ರೀ ಸತ್ಯಸಂಧರ ಬೃಂದಾವನ ಸನ್ನಿಧಿಯಲ್ಲಿ ಜ್ಞಾನಿವರೇಣ್ಯರಾದ **ಶ್ರೀ ಸತ್ಯಪ್ರಮೋದತೀರ್ಥರು** ಸುಮಾರು ಏಳೆಂಟು ಘಂಟೆಗಳು ಶ್ರೀಮನ್ನ್ಯಾಯಸುಧಾ ಗ್ರಂಥವನ್ನು ಪ್ರವಚನ ಮಾಡಿದುದಲ್ಲದೇ ಆರಾಧನೆಯ ಮುಂಚೆ ಏಕಾಸನಾರೂಢರಾಗಿ ಕಾಷ್ಠಮೌನವ್ರತವನ್ನು ನಲವತ್ತೆಂಟು ದಿನಗಳು ಮಾಡಿದಂಥ ಯತಿವರೇಣ್ಯರು. ಅಂತೆಯೇ **ಅವರಿಂದ ಆಶ್ರಮ ಪಡೆದ ಸಹೃದಯರು, ಭಕ್ತವಾತ್ಸಲ್ಯಮಯಿಗಳು, ದಯಾಳುಗಳು ಆದ ಪ್ರಸ್ತುತ ಮಠಾಧೀಶರಾದ ಶ್ರೀ ಸತ್ಯಾತ್ಮರು** ಸಹ ಒಂದು ಮಂಡಲ ಪರ್ಯಂತ ಕಾಷ್ಠಮೌನ ವ್ರತವನ್ನು ಆಚರಿಸಿ ಈ ಕ್ಷೇತ್ರದಲ್ಲಿ ಪಾಠ ಪ್ರವಚನ ಮಾಡಿ ಶ್ರೀ ಮೂಲರಾಮ ದೇವರಿಗೆ ಸಮರ್ಪಣೆ ಮಾಡಿದ್ದಾರೆ. ಮತ್ತು ಶ್ರೀ ಸತ್ಯಸಂಧರ ಆರಾಧನಾ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಿದ್ದಾರೆ.

ಶ್ರೀ ಸತ್ಯಾತ್ಮತೀರ್ಥರು ತಮ್ಮ ಅನುಗ್ರಹ ಸಂದೇಶವೊಂದರಲ್ಲಿ ಶ್ರೀ ಸತ್ಯಸಂಧರ ವಿಷಯದಲ್ಲಿ ಈ ರೀತಿ ಬರೆದಿದ್ದಾರೆ :

''ಶ್ರೀ ಸತ್ಯಸಂಧತೀರ್ಥರು ಮಹಾತಪಸ್ವಿಗಳು. ಗಂಗೆಯನ್ನು ಕಂಡ, ಗಯಾ ಮಂದಿರದ ಬೀಗ ಮುರಿದ, ವಿಠಲನಿಗೆ ಮುದ್ರಾದಾನ ಮಾಡಿದ ಶ್ರೀಕೃಷ್ಣನನ್ನು ಮುಟ್ಟಿದ, ಶೇಷನನ್ನು ನೋಡಿದ ಚಿತ್ತದಲ್ಲಿ ಶಕ್ತಿತುಂಬಿದ ಅಷ್ಟಸಿದ್ಧಿಗಳನ್ನು ಪಡೆದ ವಿಭೂತಿ ಪುರುಷರು''.

ಶಾಸ್ತ್ರ ಹಾಗೂ ಸಾಹಿತ್ಯಗಳೆರಡರಲ್ಲಿಯೂ ಉದ್ದಾಮ ಪಂಡಿತರಾದ ಶ್ರೀ ಸತ್ಯಧರ್ಮರು ಶ್ರೀ ಸತ್ಯಸಂಧರನ್ನು ಈ ರೀತಿ ಸ್ತುತಿಸಿದ್ದಾರೆ :

ಯಃ ಸತ್ಯಸುಸಂಧತೀರ್ಥಃ ವಿಹಿತಃ ಶ್ರೀ ಮೂಲರಾಮರ್ಚನಾ
ಕಾಲೇದರ್ಶ ಯದಾತ್ಮಯೌಗಿಕ ಬಲಂ ವೃಂದಾವನಂ ಚಾಲಿಯನ್ ।
ವ್ಯಾಕುರ್ವನ್ ನಿಪುಣಂ ಸುಧಾಶಯ ಚಯಂ ವೈದುಷ್ಯಮನ್ಯಾದೃಶಂ
ತತ್ಸತ್ಯವ್ರತತೀರ್ಥ ದಿವ್ಯಮಹಿಮಾ ಸೀಮಾಸಮುಜ್ಜೃಂಭತೇ ।

ಸಾಂಗಲಿಯಲ್ಲಿ ಶ್ರೀ ಮೂಲರಾಮ, ಸೀತಾದೇವಿಯರನ್ನು ಯತಿಕುಲತಿಲಕ ರಾದ, ಸಜೀವ ಬೃಂದಾವನಸ್ಥರಾಗಿ ಈಗಲೂ ಜೀವಂತರಾಗಿರುವರೆಂದು ಪ್ರತೀತಿಯಾಗಿರುವ ಶ್ರೀ ಸತ್ಯವ್ರತತೀರ್ಥರ ಬೃಂದಾವನದ ಸನ್ನಿಧಾನದಲ್ಲಿ

ಶ್ರೀ ಮೂಲರಾಮ ದೇವರನ್ನು ವಿಧ್ಯುಕ್ತವಾಗಿ ಪೂಜೆ ಮಾಡಿ ಶ್ರೀಮನ್ನ್ಯಾಯಸುಧಾ ಪ್ರವಚನ ಮಾಡಿ ಶ್ರೀ ಸತ್ಯವ್ರತತೀರ್ಥರ ಶಿರ ಕಂಪನವನ್ನು ಬೃಹದ್ ಶಿಲಾ ವೃಂದಾವನವು ತಲೆದೂಗುವಂತೆ (ಚಲಿಸುವಂತೆ) ಮಾಡಿದ ಮಹಾತ್ಮರು. **''ಮಾಧ್ವರಾದ್ಧಾಂತ ಸದ್ವ್ಯಾಖ್ಯಾಂ ಸ್ವವಂಶಿಯೇನ ಭಾಷಿತಾಂ । ಶ್ರುತ್ವಾ ಸತ್ಯವ್ರತಸ್ತೋಷಾತ್ ಶಿರಃ ಕಂಪಯತೇ ಮುಹುಃ ॥ ಇಂತಹ ಯತಿವರೇಣ್ಯರೇ ಕಾಶಿಕ್ಷೇತ್ರದಲ್ಲಿ ಸಾಕ್ಷಾತ್ತಾಗಿ ಗಂಗಾದೇವಿಯನ್ನು ಸಾಕ್ಷಾತ್ಕರಿಸಿಕೊಂಡವರು.**
ಬೃಂದಾವನವು ತಲೆದೂಗುವಂತೆ ಮಾಡಿದ್ದನ್ನು **ಶ್ರೀ ಸತ್ಯಪರಾಕ್ರಮತೀರ್ಥರು**

ಸತ್ಯಸಂಧತೀರ್ಥಮುನಿಭಿಃ ಕ್ರಿಯಮಾಣಮೂಲ–
ರಾಮಾರ್ಚನೇ ಪ್ರಮುದತಃ ಶಿರಸೋನಿಶಾಂತಂ ।
ಆಂದೋಲನಾಕ್ ಸಪದಿಯಸ್ಯ ಚಚಾಲಭವ್ಯ–
ವೃಂದಾವನಂ ತಮಿಹನೌಮಿ ಮಹಾನುಭಾವಂ ॥

ಎಂದು ಹಾಗೂ ಮರಾಠಿ ಭಾಷೆಯಲ್ಲಿ ಶ್ರೀ ಕೋನೇರಾತ್ಮಜರವರು ಬರೆದಿರುವ ಶ್ರೀ ಸತ್ಯಸಂಧವಿಜಯದಲ್ಲಿ

ಮದಸತ್ಯಸಂಧ ವಿದ್ಯಾಂಬುರಾಶೀ
ಪಾದಸಾಂಗತಾಂ ಶಿಷ್ಯನಿಕರಾಸೀ
ತ್ಯಾಗಮಯೀಂ ತೋಷಸತ್ಯವ್ರತಾಸೀ
ಹೋತಾಂ ಶಿರಃ ಕಂಪಾನೀ ಕರಿಕಾಜಾಲಾ
ಕದಾತ್ಯೆಚೇಂ ವೃಂದಾವನ ಫಿರಲೇಂ ॥

ವರ್ಣಿಸಿದ್ದಾರೆ. ಶ್ರೀ ಸತ್ಯಸಂಧರ ತಪಃಶಕ್ತಿಯನ್ನು ಎಷ್ಟು ವರ್ಣಿಸಿದರು ಅತ್ಯಲ್ಪ ಮತ್ತು ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ನಿಗ್ರಹಿಸಿದವರು.

ಶ್ರೀಗಳವರು ಕಾಶಿ ಕ್ಷೇತ್ರಕ್ಕೆ ಗಯಾದಿಂದ ಬಂದು ಭಕ್ತಜನಸಮೂಹದೆದುರಿಗೆ ಶ್ರೀ ಮೂಲರಾಮಸೀತಾದೇವಿಯರ ಪೂಜೆಯನ್ನು ಮಾಡಿ ತನುಮನಗಳು ಪುಳಕಿತ ಗೊಂಡು ಭಕ್ತಿಭಾವವೆಂಬ ವಾರಿಧಿಯಲ್ಲಿ ಮಿಂದು ತೇಲಾಡುವಂತೆ ಗೈದ ಗುರು ಸಾರ್ವಭೌಮರು ಭಾಗೀರಥಿಯನ್ನು ಯಥಾವಿಧಿ ಪೂಜೆ ಮಾಡಿದರು. ಅತ್ಯಮೂಲ್ಯ ವಾದ ಆಭರಣಗಳನ್ನು ಹಾಗೂ ವಸ್ತ್ರಗಳನ್ನು ಭಾಗೀರಥಿ ದೇವಿಗೆ ಸಮರ್ಪಿಸಿ ಭಾಗೀರಥಿಯನ್ನು ಸ್ಮರಿಸಲು ಗಂಗಾದೇವಿಯು ಸ್ವತಃ ನದಿಯೊಳಗಿನಿಂದ ತನ್ನ ಕೈಗಳನ್ನು ಚಾಚಿ ಸ್ವಾಮಿಗಳಿಂದ ಅವುಗಳನ್ನು ಸ್ವೀಕರಿಸಿದಳು. ಅಲ್ಲಿ ನೆರೆದಿದ್ದ ಸಮಸ್ತ ಜನರು ಸ್ವಾಮಿಗಳು ಅರ್ಪಿಸಿದ ಬಂಗಾರದ ಬಾಗಿನವನ್ನು ಸ್ವೀಕರಿಸಲು ನೀಡಿದ ಕಂಕಣಶೋಭಿತ ಗಂಗಾದೇವಿಯ ಕೈಗಳನ್ನು ನೋಡಿ ಭಕ್ತತುಂದಿಲರಾಗಿ ಕೃತಕೃತ್ಯರಾದರು.

ಶ್ರೀ ಸತ್ಯಸಂಧರು ಮಹಾತಪಸ್ವಿಗಳು, ಸಾಕ್ಷಾತ್ ಶ್ರೀ ವಿಠಲನಿಗೆ ಮುದ್ರಾಧಾರಣೆ ಮಾಡಿದವರು. ಗಯಾಕ್ಷೇತ್ರದಲ್ಲಿ ಹಾಗೂ ಜಗನ್ನಾಥದಲ್ಲಿ ತಮ್ಮ ತಪಃಶಕ್ತಿಯಿಂದ ಬಾಗಿಲಿಗೆ ಹಾಕಿದ್ದ ಬೀಗವನ್ನು ಕಳಚಿ ಬೀಳುವಂತೆ ಮಾಡಿ ಪೂಜೆಗೈದು ಗಯಾವಾಡರಿಗೆ ಸದ್ಬುದ್ಧಿಯನ್ನು ಕೊಡುವಂತೆ ಮಾಡಿದವರು. ಕೊಲ್ಹಾಪುರಕ್ಕೆ ಬಂದಾಗ ಭಕ್ತನೊಬ್ಬನು ಬಂದು ತನಗೆ ಶ್ರೀ ಭವಾನಿ ದೇವಿಯು ಸ್ವಪ್ನದಲ್ಲಿ ಬಂದು ಸದೃಢ ಭಕ್ತಿಯಿಂದ ತಮ್ಮಲ್ಲಿ ತೀರ್ಥವನ್ನು ಪಡೆದರೆ ಕುರುಡಾಗಿರುವ ಕಣ್ಣು ಮರುಕಳಿಸಿ ಬರುವುದೆಂದು ಹೇಳಿದಳೆಂದು ಹೇಳಿದನು. ಶ್ರೀಗಳವರು ಶ್ರೀ ಮೂಲ ರಾಮರ ಪೂಜೆಯನ್ನು ಮಾಡಿ ತೀರ್ಥವನ್ನಿತ್ತು ಅವನಿಗೆ ದೃಷ್ಟಿ ಬರುವಂತೆ ಮಾಡಿದರು. ಇವರ ಆಶ್ರಮಪೂರ್ವದ ಮೊಮ್ಮಗ ಹಾಗೂ ಶ್ರೀಮದುತ್ತರಾದಿ ಮಠದ ಸಂಸ್ಥಾನಾಧಿಪತ್ಯವನ್ನು ಪಡೆದ **ಶ್ರೀ ಸತ್ಯಪರಾಯಣರೂ** ಸಹ ಗಯಾವಾಡರಿಂದ ಬಹು ಸನ್ಮಾನಿತರಾಗಿ ಅವರುಗಳಿಗೆ ತಪ್ತಮುದ್ರಾಧಾರಣೆ ಮಾಡಿದರು. ಚನ್ನಪಟ್ಟಣದ ಬಳಿ ಶ್ರೀ ಸತ್ಯಸಂಧರು ಉಪ್ಪು ನೀರಿನ ಭಾವಿಯನ್ನು ಸಿಹಿ ನೀರಿನದಾಗಿ ಮಾಡಿದರು. ಅಲ್ಲದೇ, ಶ್ರೀ ಶಂಕರಾಚಾರ್ಯರ ಮತಾನುವರ್ತಿಯಿಂದ ಶಿವಸಹಸ್ರ ನಾಮದಿಂದ ಸುವರ್ಣ ನಾಣ್ಯಗಳಿಂದ ಪಾದಪೂಜೆಯನ್ನು ಮಾಡಿಸಿಕೊಂಡು ಅವನನ್ನು ಉದ್ಧಾರ ಮಾಡಿದರು. ಇವರು ಶ್ರೀಮದ್ವಿಷ್ಣುಸಹಸ್ರನಾಮ 'ವಿವೃಕ್ತಿ' ಅಥವ 'ಭಾಷ್ಯ', ಕೃಷ್ಣಸ್ತುತಿ, ಪುರುಷಸೂಕ್ತ ವ್ಯಾಖ್ಯಾನ ಮತ್ತು ಘರ್ಮಸೂಕ್ತ ವ್ಯಾಖ್ಯಾನ ಬರೆದಿದ್ದಾರೆ. ಸಾಕ್ಷಾತ್ ವಿಠಲನಿಗೆ ಮುದ್ರಾಧಾರಣೆ ಮಾಡಿ, ದೃಷ್ಟಿಯನ್ನು ಅಂಧನಿಗೆ ಇತ್ತು, ಗಂಗಾದೇವಿಯನ್ನು ಪ್ರತ್ಯಕ್ಷಿಸಿಕೊಂಡ ಯತಿಕುಲೋತ್ತಮರಾದ ಇವರನ್ನು ಸ್ಮರಿಸಿ ಸೇವಿಸುವುದೇ ಪುಣ್ಯ.

ಶ್ರೀ ಸತ್ಯಸಂಧರ ಶಿಷ್ಯರಾದ ಸತ್ಯವರರ ಕರಕಮಲ ಸಂಜಾತರಾದ **ಶ್ರೀ ಸತ್ಯಧರ್ಮರು ಮಹಾಮಹಿಮರು.** ಒಮ್ಮೆ ತಿರುಪತಿಗೆ ಹೋದಾಗ ಪಾಪನಾಶಿನೀ ತೀರ್ಥಕ್ಕೆ ಗುಡ್ಡದಿಂದ ಮೂರು ಪ್ರವಾಹದಿಂದ ನೀರು ಹರಿಯುತ್ತಿದ್ದು, ಮಳೆಯ ಅಭಾವಕ್ಕೆ ಒಂದೇ ಪ್ರವಾಹದಿಂದ ಬರುತ್ತಿತ್ತು. ಇವರು ಆ ತೀರ್ಥವನ್ನು ಸಂದರ್ಶಿಸಿದ ಮೇಲೆ ಮೂರು ಪ್ರವಾಹದಿಂದ ಮತ್ತೆ ನೀರು ಹರಿಯಲು ಶುರುವಾಯಿತು. ಕಾವೇರಿ ನದಿಯ ದಡದಲ್ಲಿರುವ ರಾಮನಾಥಪುರದಲ್ಲಿ ಉತ್ತರಾದಿ ಮಠದಲ್ಲಿ ಪಾಠಪ್ರವಚನ ಮಾಡುತ್ತಲಿರುವಾಗ ನದಿಯ ಒಂದು ಸಣ್ಣ ಪ್ರವಾಹವು ಮಠದ ಮುಂದೆ ಹರಿದು ಮುಖ್ಯವಾಹಿನಿಯನ್ನು ಸೇರಿತಂತೆ. ಶ್ರೀಗಳವರು ಹರಿದ್ರಾಕುಂಕುಮ ಪೀತಾಂಬರಗಳನ್ನು ಸಮರ್ಪಿಸಿ ಶ್ರೀ ಗಂಗಾದೇವಿಯನ್ನು ಪೂಜಿಸಿ ''ಗಂಗಾ ಲಹರಿ''ಯನ್ನು ರಚಿಸಿದರಂತೆ. ಇದನ್ನು ನಿತ್ಯವೂ ಪಠಿಸಿದರೆ ಶ್ರೀರಾಮನಲ್ಲಿ ಅತಿಶಯ ಭಕ್ತಿಯುಂಟಾಗುತ್ತದೆ. ಹೊಳೆಹೊನ್ನೂರಿನಲ್ಲಿ ಶ್ರೀಗಳವರ ಬೃಂದಾವನದ

ಬಳಿಯಲ್ಲಿ ಲಿಂಗಗಳು ಕೆಲವು ಉದ್ಭವವಾಗಿವೆ. ಹಿಂದೆ ಗಂಗಾದೇವಿಯು ಇಲ್ಲಿ ಸಣ್ಣದಾಗಿ ಒಸರಿಸುತ್ತಿದ್ದಳಂತೆ. ಗಂಗಾದೇವಿಯನ್ನು ಹಾಗೂ ರುದ್ರದೇವರನ್ನು ಸಾಕ್ಷಾತ್ಕರಿಸಿಕೊಂಡ ಮಹಾಯತಿಗಳು.

ಶ್ರೀ ಸತ್ಯಧರ್ಮರು ತಮ್ಮ ಸಂಚಾರಾವಧಿಯಲ್ಲಿ ಶ್ರೀ ಪ್ರಾಣದೇವರ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ವಿವಿಧೆಡೆಗಳಲ್ಲಿ ಶ್ರೀ ಪ್ರಾಣದೇವರನ್ನು ಪ್ರತಿಷ್ಠಾಪನೆಗೈದಿದ್ದರೂ ಬೆಂಗಳೂರಿನಲ್ಲಿಯೇ ಅವರು ಪ್ರತಿಷ್ಠಾಪನೆ ಗೈದಿರುವ ಶ್ರೀ ಪ್ರಾಣದೇವರ ವಿಷಯ ಬಹು ಜನಕ್ಕೆ ತಿಳಿದಿಲ್ಲ. ಶ್ರೀ ರಾಮೇಶ್ವರ ಯಾತ್ರೆ ಮಾಡಿ ದಾರಿಯಲ್ಲಿ ಅರಣೆಯನ್ನು ಸಂದರ್ಶಿಸಿ ಹಿಂತಿರುಗಿ ಬೆಂಗಳೂರಿನಲ್ಲಿರುವಾಗ ಮುಮ್ಮಡಿ ಕೃಷ್ಣರಾಜ ಒಡೆಯರವರು ಶ್ರೀಗಳನ್ನು ಭೇಟಿ ಮಾಡಿದರು ಹಾಗೂ ಮೈಸೂರಿಗೆ ಇಬ್ಬರು ಒಟ್ಟಿಗೆ ಬಂದರು. ಅಂದರೆ, ಶ್ರೀಗಳವರು ಆ ಸಮಯದಲ್ಲಿ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಉತ್ತರಾದಿಮಠದಲ್ಲಿ ಶ್ರೀ ಪ್ರಾಣದೇವರನ್ನು ಪ್ರತಿಷ್ಠೆ ಮಾಡಿರಬಹುದು. ಶ್ರೀ ಸತ್ಯಧರ್ಮತೀರ್ಥರು ಸುಮಾರು 33 (ಮೂವತ್ತ ಮೂರು) ವರ್ಷ 1797ರಿಂದ 1830ರವರೆಗೆ ಪೀಠವನ್ನಲಂಕರಿಸಿದ್ದರು. ಚಿಕ್ಕಪೇಟೆ ಯಲ್ಲಿ ಪ್ರತಿಷ್ಠಿತವಾಗಿರುವ ಹನುಮಂತದೇವರು ಸುಮಾರು ನೂರ ಎಪ್ಪತ್ತನಾಲ್ಕು ವರ್ಷದ ಹಿಂದಿನದು ಎಂದು ಹೇಳಬಹುದು. ಇದನ್ನು ಅಭಿನವ ಆನಂದತೀರ್ಥ ರೆಂದು ಪ್ರಖ್ಯಾತಿಯಾಗಿರುವ ಶ್ರೀ ಸತ್ಯಧ್ಯಾನತೀರ್ಥರ ಕಾಲದಲ್ಲಿ ಹಾಗೂ ಪ್ರಾತಃಸ್ಮರಣೀಯರಾದ ಶ್ರೀ ಸತ್ಯಪ್ರಮೋದತೀರ್ಥರ ಕಾಲದಲ್ಲಿ ಜೀರ್ಣೋದ್ಧಾರ ಮಾಡಲಾಯಿತಂತೆ. ಜನಜಂಗುಳಿ ಹಾಗೂ ವಾಣಿಜ್ಯ ಮಳಿಗೆಗಳ ಕಾನನದಲ್ಲಿದ್ದರೂ ಶ್ರೀ ಸತ್ಯಪ್ರಮೋದತೀರ್ಥರ ಆಶ್ರಮಪೂರ್ವದ ಪುತ್ರರಾದ ಶ್ರೀ ರಂಗನಾಥಚಾರ್ಯ ಗುತ್ತಲು ಹಾಗೂ ಶ್ರೀಗಳವರ ಪೌತ್ರರಾದ ಶ್ರೀ ಸತ್ಯಧ್ಯಾನಾಚಾರ್ಯ ಕಟ್ಟಿಯವರ ಆಣತಿ ಹಾಗೂ ಮಾರ್ಗದರ್ಶನದಲ್ಲಿ ಇಲ್ಲಿಯ ಪ್ರಾಣದೇವರ ಅರ್ಚಕರಾದ ಶ್ರೀ ಪವಮಾನಚಾರ್ಯರು ಬಹಳ ಭಕ್ತಿಯುತವಾಗಿ ಪೂಜೆ ಮಾಡುತ್ತಾ ದೇವಸ್ಥಾನದ ಅಭಿವೃದ್ಧಿಗೆ ಶ್ರಮ ವಹಿಸಿದ್ದಾರೆ. ಮಹಾನುಭಾವರಾದ ಶ್ರೀ ಸತ್ಯಧರ್ಮರಿಂದ ಪ್ರತಿಷ್ಠೆಗೊಂಡ ಚಿಕ್ಕಪೇಟೆಯ ಶ್ರೀ ಉತ್ತರಾದಿ ಮಠದ ಶ್ರೀ ಪ್ರಾಣದೇವರು ಸತ್ಯವಾದ ದೇವರು. ಭಕ್ತಾಭೀಷ್ಟಪ್ರದಾಯಿಕವಾಗಿರುವ ಮನೋಭೀಷ್ಟದಾಯಕ ಸ್ವಾಮಿ. ತನುಮನದಿಂದ ಸೇವಿಸುವವರಿಗೆ ಮನೋವಾಂಛಿತ ಫಲದಾತನು. ಧನುರ್ಮಾಸ ಪೂಜೆ, ಸತ್ಯನಾರಾಯಣ ಪೂಜೆ, ಮಧು ಅಭಿಷೇಕ, ನಿತ್ಯ ಪೂಜೆ, ಪಂಚಾಮೃತ ನಡೆಯುತ್ತಲಿದ್ದು ಭಕ್ತಾದಿಗಳು ಭಾಗವಹಿಸಿ ಶ್ರೀ ಪ್ರಾಣದೇವರ ಹಾಗೂ ಶ್ರೀ ಸತ್ಯಧರ್ಮರ ಪೂರ್ಣಕಟಾಕ್ಷಕ್ಕೆ ಭಾಗಿಯಾಗುತ್ತಿದ್ದಾರೆ.

ಶ್ರೀ ಸತ್ಯಧರ್ಮರಿಂದ ಪ್ರತಿಷ್ಠಾಪನೆಗೊಂಡ ಮುಖ್ಯಪ್ರಾಣದೇವರು ಎದುರುಮುಖನಾಗಿದ್ದು ಸುಮಾರು ಎರಡುವರೆಯಿಂದ ಅಡಿ ಎತ್ತರವಾಗಿದೆ. ಅಂಜಲಿ

ಬದ್ಧನಾಗಿ ಭಕ್ತಾಂಜನೇಯ ಭಂಗಿಯಲ್ಲಿರುವುದು ಒಂದು ವಿಶೇಷ. ಬೆಂಗಳೂರಿನಲ್ಲಿ ಇಂತಹ ಆಂಜನೇಯನ ವಿಗ್ರಹವುಳ್ಳ ದೇವಾಲಯಗಳಿಗೆ ಸ್ಫೂರ್ತಿಯಾಗಿರಬಹುದೇನೊ. ಮತ್ತೊಂದು ವೈಶಿಷ್ಟ್ಯವೆಂದರೆ ಪ್ರಾಣದೇವರ ಮೇಲೆ ನರಸಿಂಹದೇವರಿರುವುದು. ಶ್ರೀ ಸತ್ಯಧರ್ಮರಿಗೆ ಶ್ರೀ ನರಸಿಂಹದೇವರು ಸಾಕ್ಷಾತ್ಕರಿಸಿ ಗಂಧ ಪ್ರಸಾದವನ್ನು ನೀಡಿ ದರ್ಶನವಿತ್ತುದರಿಂದ, ಪ್ರಾಣದೇವರ ವಿಗ್ರಹದ ಮೇಲೆ ನರಸಿಂಹದೇವರು ಇರಬಹುದು. ಅರ್ಚಕರಾದ ಶ್ರೀ ಪವಮಾನಚಾರ್ಯರು ಶ್ರೀ ಸತ್ಯವರರು ಹಾಗೂ ಶ್ರೀ ಸತ್ಯಪರಾಯಣರ ವೃಂದಾವನವಿರುವ ಸಂತೇಬಿದನೂರಿನ ಕ್ಷೇತ್ರದೊಡೆಯನಾದ (ಸತ್ಯಕ್ಷೇತ್ರವೆಂದು ಹೆಸರಾದ) ಮುಖ್ಯಪ್ರಾಣದೇವರ ಪೂಜೆ ಮಾಡುವ ವಂಶಸ್ಥರು. ಇವರು ಚಿಕ್ಕಪೇಟೆಯಲ್ಲಿರುವ ಪ್ರಾಣದೇವರಿಗೆ ಮಾಡುವ ಮಧು ಅಭಿಷೇಕ ಭಕ್ತಾದಿಗಳ ಕಷ್ಟಕಾರ್ಪಣ್ಯಗಳನ್ನು ಪರಿಹರಿಸುತ್ತಿದೆ.

ಶ್ರೀ ಸತ್ಯವರರ ಕಾಲದಲ್ಲಿ ಶ್ರೀ ಮೂಲರಾಮದೇವರು ಹಾಗೂ ಶ್ರೀ ಸೀತಾದೇವಿಯ ವಿಗ್ರಹಗಳು ನಾಮಗೊಂಡಲಿನಲ್ಲಿ ಕಳುವಾದಾಗ ಶ್ರೀ ನವರತ್ನ ಅಣ್ಣಯ್ಯಾಚಾರ್ಯರಿಗೆ ಅಕಸ್ಮಾತ್ತಾಗಿ ಬಾಳೆಎಲೆಯಲ್ಲಿರಿಸಿದ ಆ ವಿಗ್ರಹಗಳು ಸಿಗಲು ಶ್ರೀಗಳವರು ಬಹಳ ಸಂತೋಷದಿಂದ ತಾವು 21 ದಿನಗಳು ಉಪವಾಸ ಮಾಡಿದ್ದರೂ ಕಣ್ಣುಗಳಿಗೆ ಒತ್ತಿಕೊಂಡು ಆನಂದತುಂದಿಲರಾದರು. ಅಲ್ಲದೇ, ಕ್ರಮೇಣ ಶ್ರೀ ಪೂರ್ಣಯ್ಯನವರ ಸಮಯೋಚಿತ ಸಲಹೆಯ ಮೇಲೆ ಅಣ್ಣಯ್ಯಾಚಾರ್ಯರಿಗೆ ತುರೀಯಾಶ್ರಮವನ್ನಿತ್ತು ಶ್ರೀ ಸತ್ಯಧರ್ಮರೆಂದು ಕರೆದರು. ಶ್ರೀ ಮೂಲರಾಮ ಸೀತೆಯರನ್ನು ಒಲಿಸಿಕೊಂಡ ಮಹಾನುಭಾವರಾದ ಶ್ರೀ ಸತ್ಯಧರ್ಮರು ಮುಂದೆ ಸಾಕ್ಷಾತ್ ರುದ್ರದೇವರನ್ನು ಹಾಗೂ ಹೊಳೆನರಸೀಪುರದಲ್ಲಿ ಶ್ರೀ ಲಕ್ಷ್ಮೀನರಸಿಂಹ ದೇವರನ್ನು ಪ್ರತ್ಯಕ್ಷಿಸಿಕೊಂಡರು. ಒಮ್ಮೆ ಶ್ರೀಗಳವರು ತಮ್ಮ ಗುರುಗಳ ಆರಾಧನೆ ಮಾಡಿ, ತಾವು ಹಾಗೂ ಕಿರಿಯ ಸ್ವಾಮಿಗಳು ಜೊತೆ ಊಟಕ್ಕೆ ಕೂಡಬೇಕೆಂದಿರುವಾಗ ಒಬ್ಬ ಸ್ಮಾರ್ತ ಬ್ರಾಹ್ಮಣನು ಜಟೆಯನ್ನು ಧರಿಸಿ ಅವನ ಪದ್ಧತಿಯಂತೆ ವಿಭೂತಿಯನ್ನು ಧರಿಸಿ ಬಂದನು. ಶ್ರೀಗಳವರು ಬಂದ ಬ್ರಾಹ್ಮಣನಿಗೆ ಅಲಂಕಾರ ಪಂಕ್ತಿಯಲ್ಲಿ ಭೋಜನಕ್ಕೆ ಕೂಡಿಸಲು ಮಿಕ್ಕವರೆಲ್ಲರೂ ಅಸಮಾಧಾನ ತೋರಲು ಲೆಕ್ಕಿಸದೆ ಬೆಳ್ಳಿ ತಂಬಿಗೆ, ಧೋತ್ರ ಇತ್ಯಾದಿಗಳನ್ನು ಕೊಟ್ಟು ಸತ್ಕರಿಸಿದರು. ಶ್ರೀಪಾದ ಪುತ್ರರು ಮೊದಲಾಗಿ ಇತರರು ಕುತೂಹಲಭರಿತರಾಗಿರುವುದನ್ನು ಕಂಡು ಊಟವಾದ ಮೇಲೆ ಆ ಬ್ರಾಹ್ಮಣನು ಎಲ್ಲಿ ಹೋದನೆಂಬುದನ್ನು ತಿಳಿಯಲು ಕಳುಹಿಸಿದರು. ಆ ಬ್ರಾಹ್ಮಣನು ಊರ ಮುಂದಿದ್ದ ರುದ್ರದೇವರ ಗುಡಿಯಲ್ಲಿ ಹೋಗಿದ್ದನ್ನು ನೋಡಿದರು. ಅಲ್ಲದೇ ಬಾಗಿಲು ತೆಗೆದಾಗ ಶಿವಲಿಂಗದ ಮುಂದೆ ಶ್ರೀಗಳವರು ಕೊಟ್ಟಿದ್ದ ಧೋತ್ರ, ಬೆಳ್ಳಿ ಪಂಚಪಾತ್ರೆ, ತಂಬಿಗೆಗಳಿದ್ದುದನ್ನು ಬಂದು ಹೇಳಿದರು. ಆಗ ರುದ್ರದೇವರೇ ತಮಗೆ ದರ್ಶನವಿತ್ತು ಭೋಜನ ಮಾಡಿದನೆಂದು ಹಾಗೂ ಇನ್ನು

ಕೇವಲ ಒಂದು ವರ್ಷ ಆಯುಸ್ಸು ಇರುವುದೆಂದು ತಿಳಿಸಲು ಬಂದಿದ್ದನೆಂದು ಹೇಳಿದರು. ಇವರ ಮಹಿಮೆಯನ್ನು ಎಷ್ಟು ಹೇಳಿದರೂ ಸಾಲದು. ಶ್ರೀ ಸತ್ಯಧರ್ಮತೀರ್ಥರು ಹೇಮಾವತಿ ನದಿದಂಡೆಯ ಮೇಲೆ ಇರುವ ಹೊಳೆನರಸೀಪುರ ವನ್ನು ತಮ್ಮ ಅನುಜರಾದ ಶ್ರೀ ನವರತ್ನ ಶ್ರೀನಿವಾಸಚಾರ್ಯರಿಗೆ ಆಶ್ರಮವನ್ನಿತ್ತು ಶ್ರೀ ಸತ್ಯಸಂಕಲ್ಪರೆಂದು ಕರೆದ ಮೇಲೆ ಮಠದ ಕೇಂದ್ರವನ್ನಾಗಿ ಮಾಡಿಕೊಂಡು ಪಾಠ ಪ್ರವಚನಗಳಲ್ಲಿ ತೊಡಗಿಸಿಕೊಂಡಿದ್ದರು. ಆಗ್ಗೆ ತಮ್ಮ ಮಠದಿಂದ ಇಲ್ಲಿಯ ಕ್ಷೇತ್ರ ದೊಡೆಯನಾದ ಶ್ರೀ ಲಕ್ಷ್ಮೀನರಸಿಂಹ ಗುಡಿಗೆ ಗಂಧವನ್ನು ಕಳುಹಿಸುತ್ತಿದ್ದರು. ಅಲ್ಲದೇ, ಪ್ರತಿದಿನವು ಸಾಯಂಕಾಲ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಹಾಗೂ ಗಂಧಪ್ರಸಾದವನ್ನು ಪಡೆಯುತ್ತಿದ್ದರು. ಒಮ್ಮೆ ದೇವಸ್ಥಾನಕ್ಕೆ ಶ್ರೀಗಳವರು ಸ್ವಲ್ಪ ನಿಧಾನವಾಗಿ ಹೋಗಲು ಅರ್ಚಕನು, ಸ್ವಾಮಿಗಳು ಬರುವುದಿಲ್ಲವೇನೋ ಎಂದು ತಿಳಿದು, ಬಾಗಿಲು ಹಾಕಿಕೊಂಡು ಹೊರಟುಹೋದನು. ತರುವಾಯ ಶ್ರೀಗಳವರು ಎಂದಿನಂತೆ ಬಂದು ಹೋಗಿದ್ದು ತಿಳಿದು ಅರ್ಚಕನು ಗುರುಗಳಲ್ಲಿ ಬಂದು ತಮ್ಮ ತಪ್ಪನ್ನು ಕ್ಷಮಿಸಬೇಕೆಂದನು. ಇದನ್ನು ನೋಡಿ ಸ್ವಾಮಿಗಳು, ಅರ್ಚಕರೇ, ತಾವು ಏನು ಹೇಳುವಿರಿ? ನೀವೆ ಸ್ವತಃ ಗಂಧಪ್ರಸಾದವನ್ನು ನೀಡಿದಿರಲ್ಲಾ ಹಾಗೂ ಸ್ವಾಮಿಯಾದ ಪ್ರಹ್ಲಾದವರದನನ್ನು ನೋಡಿಕೊಂಡು ಬಂದೆವಲ್ಲ ಎಂದರು. ನೋಡಿ, ನೀವು ನೀಡಿರುವ ಗಂಧಪ್ರಸಾದವೆಂದು ಉಳಿದಿದ್ದ ಚೂರನ್ನು ತೋರಿಸಿದರು. ಅರ್ಚಕರು ಸಾಷ್ಟಾಂಗ ನಮಸ್ಕಾರವನ್ನು ಹಾಕಿ ಅಂಜಲಿಬದ್ಧನಾಗಿ, ಮಹಾಸ್ವಾಮಿ, ತಾವು ಆ ಲಕ್ಷ್ಮೀನರಸಿಂಹನಿಂದಲೇ ಗಂಧ ಪ್ರಸಾದವನ್ನು ಸ್ವೀಕರಿಸಿದ ಯತಿಕುಲೋತ್ತಮರೆಂದು ಪದೇ ಪದೇ ವಂದಿಸಿದನು.

ಶ್ರೀ ಬಿ.ಎನ್.ಕೆ. ಶರ್ಮಾರವರು ತಮ್ಮ 'History of the Dvaita School of Vedanta' ಪುಟ 512ರಲ್ಲಿ

"Some ten works have been attributed to Satyadharma......... His most outstanding work, however, is his useful partial commentary on the Valmiki Ramayana (Kandas ii-vi)........ As the Valmiki Ramayana has received practically little cannonical recognition at the hands of Madhva or his commentators, who look to other versions like the Mula Ramayana for inspiration and support, this commentary on Valmiki's work assumes special significance. The Doctrinal aspect is not lost sight of by Satyadharma in his commentary".

ಶ್ರೀ ಸತ್ಯಧರ್ಮರು ಸರ್ವೋತ್ಕೃಷ್ಟವಾದ ಕೃತಿಗಳನ್ನು ನೀಡಿ ದ್ವೈತವೇದಾಂತದ ಗ್ರಂಥಭಂಡಾರವನ್ನು ಶ್ರೀಮಂತಗೊಳಿಸಿದ್ದಾರೆ. ಶ್ರೀಗಳು ಧರಿಸುತ್ತಿದ್ದ ಪಾದುಕೆಗಳು ಈಗ ಬೆಂಗಳೂರಿನಲ್ಲಿ ಶ್ರೀ ರಾಮಧ್ಯಾನಿ ಶ್ರೀನಿವಾಸರಾಯರ ಮನೆಯಲ್ಲಿ ಅವರಿಂದ ಪೂಜೆಗೊಳ್ಳುತ್ತಿದೆ. ಅವರ ಪೂರ್ವಜನ್ಮದ ಪುಣ್ಯದ ಫಲ.

ಆಶ್ರಮಪೂರ್ವದಲ್ಲಿ ಶ್ರೀ ಸತ್ಯಧರ್ಮರ ತಮ್ಮಂದಿರಾದ ನವರತ್ನ ವಂಶದವರೇ ಆದ ಶ್ರೀ ರಾಮಾಚಾರ್ಯರೇ ಶ್ರೀ ಸತ್ಯಸಂಕಲ್ಪರೆಂದೆನಿಸಿ ಶ್ರೀಮದುತ್ತರಾದಿ ಮಠದ ಪೀಠವನ್ನಲಂಕರಿಸಿದ ಮಹಾತಪಸ್ವಿಗಳಾದ ಯತಿಗಳು. ಇವರೂ ಸಹ ಆಶ್ರಮ ಪೂರ್ವದಲ್ಲಿ ಸತ್ಯಸಂಧರು, ಸತ್ಯವರರು ಹಾಗೂ ಸತ್ಯಧರ್ಮರಂತೆ ಶ್ರೀ ಸತ್ಯಬೋಧರ ವಿದ್ಯಾಶಿಷ್ಯರಾಗಿ ನಂತರ ಶ್ರೀಮದುತ್ತರಾದಿ ಮಠದ ಪೀಠವನ್ನೇರಿ ದವರು. ಇವರ ಕಾಲದಲ್ಲಿ ದೇಶದಲ್ಲಿ ಭೀಕರ ಕ್ಷಾಮ ಬಂದು ಜನರು ಬಹಳ ಕಷ್ಟಗಳನ್ನು ಅನುಭವಿಸುತ್ತಿದ್ದರು. ಆದರೂ ಶ್ರೀಮದುತ್ತರಾದಿ ಮಠದಲ್ಲಿ ಬಂದ ಅನ್ನದಾನ ಪದ್ಧತಿಯನ್ನು ನಿಲ್ಲಿಸದೆ ಇವರು ನಡೆಸಿಕೊಂಡು ಬಂದರು. ಅಂಥಹ ಪುಣ್ಯಕಾರ್ಯಕ್ಕೆ ಮಠದ ಬೆಲೆಬಾಳುವ ವಸ್ತುವನ್ನು ಒತ್ತೆ ಹಾಕಲು ಹಿಂಜರಿಯಲಿಲ್ಲ. ಮುಮ್ಮಡಿ ಕೃಷ್ಣರಾಜ ಒಡೆಯರು ಶ್ರೀಮಠಕ್ಕೆ ನೀಡಿದ ಸಹಕಾರ ಹಾಗೂ ದಾನವಾಗಿ ಬಂದ ವಜ್ರವೈಢೂರ್ಯಗಳಿಂದ ಪೂಜೆ ಪುನಸ್ಕಾರಗಳು ನಿರಂತರವಾಗಿ ನಡೆಯಿತು. ಮಹಾತಪಸ್ವಿಗಳಾದ ಇವರು ಒಮ್ಮೆ ಗಂಗಾಸ್ನಾನ ಮಾಡಬೇಕೆಂದು ಬಯಸಿದಾಗ ಹರಿಪದಜಾತಳಾದ ಜಾಹ್ನವಿಯು ಅವರಿರುವ ಸ್ಥಳಕ್ಕೆ ಬಂದು ಅವರಿಗೆ ದರ್ಶನ ಕೊಟ್ಟಳು. ಇವರ ವೃಂದಾವನದಡಿಯಿಂದ ಸಣ್ಣ ಪ್ರಮಾಣದಲ್ಲಿ ಗಂಗೆ ಹರಿಯುತ್ತಿದ್ದು ದನ್ನು ನೋಡಿದವರು ಈಗಲೂ ಇದ್ದಾರೆ. ಮೈಸೂರಿನಲ್ಲಿ ವೃಂದಾವನಸ್ಥರಾದ ಇವರು ಘೂಳಿ ಬಾಳಾಚಾರ್ಯರಿಗೆ ಆಶ್ರಮವನ್ನಿತ್ತು ಶ್ರೀ ಸತ್ಯಸಂತುಷ್ಟರೆಂದು ಕರೆದರು. ಇವರ ಬೃಂದಾವನವು ತಮ್ಮ ಗುರುಗಳ ಬೃಂದಾವನದ ಪಕ್ಕದಲ್ಲಿಯೇ ಇದೆ. ಚತುರ್‌ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದ ಇವರು ವಾದಕಾಲದಲ್ಲಿ ಪ್ರತಿಪಾದನೆ ಮಾಡುವಾಗ ಘೂಳಿಯಂತೆ ನುಗ್ಗಿ ಪ್ರತಿವಾದಿಗಳನ್ನು ಉತ್ತರ ಹೇಳಲಾಗದಂತೆ ಕೋಟಿಗಳನ್ನು ಹಾಕಿ ಎಲ್ಲರನ್ನು ಅಪ್ರತಿಭರನ್ನಾಗಿ ಮಾಡುತ್ತಿದ್ದರಂತೆ. ಇವರು ಎಲ್ಲಾ ವೇದಾಂತ ಕೋವಿದರನ್ನು ಕಲೆ ಹಾಕಿ ಚತುರ್‌ಶಾಸ್ತ್ರಗಳಲ್ಲಿ ವಾದವಿವಾದವನ್ನು ಶ್ರೀಮನ್ಮಹಾರಾಜರ ಸಮ್ಮುಖದಲ್ಲಿ ಏರ್ಪಡಿಸಿ ವಿದ್ವಾಂಸರಿಗೆ ಮಾನಪತ್ರಿಕೆಗಳನ್ನು ಕೊಡಿಸಿದರಂತೆ. ಅಂದಿನ ಸಭಾವು ಧರ್ಮರಾಯನ ರಾಜಸೂಯ ಯಾಗದ ನೆನಪನ್ನು ತರುವಂತಿತ್ತು.

ಶ್ರೀ ಸತ್ಯಸಂತುಷ್ಟರ ಸಾಕ್ಷಾತ್ ಶಿಷ್ಯರೇ ಶ್ರೀ ಸತ್ಯಪರಾಯಣತೀರ್ಥರು. ಆಶ್ರಮಪೂರ್ವದಲ್ಲಿ ಶ್ರೀ ಸತ್ಯಸಂಧರ ಮೊಮ್ಮಕ್ಕಳು. ಶ್ರೀ ಸತ್ಯಸಂಧರಂತೆ ಇವರೂ ಸಹ ಗಯಾದಲ್ಲಿ ಗಯಾವಾಡರುಗಳಿಂದ ಸತ್ಕರಿಸಿಕೊಂಡವರು. ಇವರು ದ್ವೈತ

ವೇದಾಂತವನ್ನು ಅಭಿವೃದ್ಧಿಗೊಳಿಸಿದ ಯತಿಕುಲೋತ್ತಮರು. ಶ್ರೀರಾಮ ಶಬ್ದವನ್ನು ತಮ್ಮ 'ಶ್ರೀರಾಮಶಬ್ದಾರ್ಥ–ರತ್ನಮಾಲಾ'ದಲ್ಲಿ 185 ರೀತಿಯಲ್ಲಿ 6 ಮಾಲೆಗಳಲ್ಲಿ ಅರ್ಥೈಸಿದ್ದಾರೆ. ವಿದ್ವನ್ಮಣಿಗಳಿಂದ ವೇದಶಾಸ್ತ್ರ ಪಾರಂಗತರಿಂದ ಪಂಡಿತಪಾಮರ ರಿಂದ ಪೂಜಿತರಾದ, ಪ್ರಾತಃಸ್ಮರಣೀಯರಾದ ಶ್ರೀ ಸತ್ಯಪರಾಯಣರು ಶ್ರೀರಾಮ ಶಬ್ದಾರ್ಥರತ್ನಮಾಲಾದಲ್ಲಿ 31ನೇ ಶ್ಲೋಕದಲ್ಲಿ ಈ ರೀತಿ ಅರ್ಥೈಸಿದ್ದಾರೆ;

''ರ – ಆನಂದ ಜನಕಂ, ಮಾ – ತೀರ್ಥಂ ಯಸ್ಮಾತ್ಸಃ ರಾಮಃ ಆನಂದತೀರ್ಥಃ... ರ – ಆನಂದಜನಕವಾದ, ಮಾ – ತೀರ್ಥವು ಯಾರಿಂದ ಜನಿಸಿದವೋ ಅವರು 'ರಾಮ' ಎಂದೆನಿಸುತ್ತಾರೆ. ಅವರೇ ಶ್ರೀಮದಾನಂದ ತೀರ್ಥರು. ಅಂಥಹ ಆನಂದತೀರ್ಥರು ಶ್ರೀ ಕೃಷ್ಣಸ್ತುತಿಯಲ್ಲಿ ''ಅಂಬರಗಂಗಾ ಚುಂಬಿತ ಪಾದಃ.... ನಿರತಃ'' ಎಂದು ಗಂಗೋದ್ಭವದಲ್ಲಿ ಶ್ರೀಮನ್ನಾರಾಯಣನ ಪಾದವರ್ಣನೆ ಮಾಡಿದ್ದಾರೆ. ಶ್ರೀ ಸತ್ಯಪರಾಯಣರು, ಗಂಗಾಯಮುನಾ ನದಿಗಳ ಸಂಗಮ ಪ್ರದೇಶಕ್ಕೆ ಶೋಭೆ ನೀಡುವವನು ಹಾಗೂ ಯಮುನಾ ನದಿಯಿಂದೊಡ ಗೂಡಿ ಬಂದವನು ಎಂದು ರಾಮ ಶಬ್ದಕ್ಕೆ ಅರ್ಥೈಸಿದ್ದಾರೆ. ಇದರಿಂದ ಗಂಗಾನದಿಯ ಶ್ರೇಷ್ಠತೆ ಎಷ್ಟೆಂದು ಅರಿವಾಗುವುದು.

ಶ್ರೀಮದುತ್ತರಾದಿ ಮಠದ ಪೀಠದಲ್ಲಿ ಹದಿನೈದನೆಯವರಾದ ಶ್ರೀ ವೇದವ್ಯಾಸ ತೀರ್ಥರ ಶಿಷ್ಯರಾದ ಶ್ರೀ ಕೃಷ್ಣದ್ವೈಪಾಯನತೀರ್ಥರು ಮತ್ತೊಬ್ಬ ಯತಿವರೇಣ್ಯರು ಗಂಗಾದೇವಿಯನ್ನು ಸಾಕ್ಷಾತ್ಕರಿಸಿಕೊಂಡವರು. ಒಮ್ಮೆ ಇವರು

''ಗಂಗಾ ನದಿಯ ಸ್ನಾನಕ್ಕೆಂದು ತಮ್ಮ ಪರಿವಾರದೊಡನೆ ಹೊರಟಾಗ ದಾರಿಯಲ್ಲಿ, ಒಂದು ರಾತ್ರಿ ಸ್ವಪ್ನದಲ್ಲಿ ಭಾಗೀರಥಿಯು ನಿಮ್ಮ ವಾಙ್ಮಯರೂಪಿ ಪ್ರವಾಹ ಮೀಯಲು ನಾನೇ ನೀವಿದ್ದೆಡೆ ವ್ಯಾಸಮಂದಿರಕ್ಕೆ ಬರುತ್ತೇನೆ'' ಎಂದು ಹೇಳಿದಂತಾಯಿತು. ಅದರಂತೆ ಅವರು ಮುಂದುವರಿಯದೆ, ಹಿಂದಿರುಗಿದರು. ಕೆಲದಿನಗಳು ಉರುಳಿದ ಮೇಲೆ ಒಂದು ದಿನ ಅವರು ಕುಳಿತ ವ್ಯಾಸ ಮಂದಿರದಲ್ಲಿನ ಮಾಡದಿಂದ ಶುಭ್ರ ನೀರಿನ ಝರಿಯು ಪುಟ ನೆಗೆದು ಅವರ ತಲೆಯ ಮೇಲೆ ಬಿದ್ದು ಧಾರಾಕಾರವಾಗಿ ಹರಿಯುತ್ತಿತ್ತು. ಆಗ ಎಲ್ಲ ಶಿಷ್ಯವೃಂದ ಹಾಗೂ ಭಾರಿ ಜನಸ್ತೋಮ ಅದರಲ್ಲಿ ಮಿಂದು ಧನ್ಯರಾದರು''

ತಮ್ಮ ತಪಃಪ್ರಭಾವದಿಂದ ಗಂಗೆಯನ್ನು ತಮ್ಮಲ್ಲಿಗೆ ಬರಮಾಡಿಕೊಂಡ ಪ್ರಾತಃಸ್ಮರಣೀಯರಾದ ಇವರು ದ್ವಾಪರದಲ್ಲಿ ಧೃಷ್ಟದ್ಯುಮ್ನರಾಗಿ ಮತ್ತೆ ಈ ಯುಗ ದಲ್ಲಿ ಗೋವಿಂದ ಒಡೆಯರಾಗಿ ಹಾಗೂ ವ್ಯಾಸತತ್ವಜ್ಞರಾಗಿ ಅವತರಿಸಿದವರು.


ಇಂಥಹ ಮಹಾಮಹಿಮರು ಅಲಂಕರಿಸಿದ ಶ್ರೀಮದುತ್ತರಾದಿ ಮಠವು ಎಲ್ಲಾ ವಿಷಯಗಳಲ್ಲಿಯೂ ಮಹತ್ತಾಗಿ ಶ್ರೇಷ್ಠತೆಯನ್ನು ಪಡೆದಿದೆ. ಒಮ್ಮೆ ಸನಕಾದಿ

ಮಹರ್ಷಿಗಳು ಸರ್ವತಂತ್ರ ಸ್ವತಂತ್ರ, ಜಗದೋದ್ಧಾರ, ಜಗನ್ನಿಯಾಮಕ ಸರ್ವಗುಣ ಪರಿಪೂರ್ಣನಾದ ಶ್ರೀಮನ್ನಾರಾಯಣನ ಬಳಿಗೆ ಬಂದು ''ಸ್ವಾಮಿ, ದೇವ ದೇವೋತ್ತಮ, ಅಗಮ್ಯಾಗಮ್ಯ ಗೋಚರ, ನಾವು ಪ್ರಪಂಚ ವಿಷಯ ಹಾಗೂ ಭಗವಂತನ ವಿಷಯಕವಾಗಿ ಅನೇಕ ತತ್ವಗಳು, ಮಹಿಮೆಗಳ ಬಗ್ಗೆ ಜಿಜ್ಞಾಸುಗಳಾಗಿ ನಿನ್ನಲ್ಲಿ ಬಂದಿದ್ದೇವೆ. ಕೃಪಾಸಿಂಧು, ನಮ್ಮ ಸಂದೇಹಗಳಿಗೆ ನೀನೆ ಉತ್ತರಿಸಿ ಸಲಹ ಬೇಕೆಂದರು. ಶ್ರೀಹರಿಯು ಪ್ರಸನ್ನನಾಗಿ ನಿಮ್ಮ ತತ್ವ ಪ್ರಶ್ನೆಗಳನ್ನು ಹಾಗೂ ಎಲ್ಲಾ ಸಂದೇಹಗಳನ್ನು ಉತ್ತರಿಸಿ ಅನುಗ್ರಹಿಸುವನೆಂದನು. **''ಹರಿರ್ಹರತಿ ಪಾಪಾನಿ ದುಷ್ಟ ಚಿತ್ತೈರಪಿಸ್ಮೃತಃ। ಅನಿಚ್ಛಾಯಾಪಿ ಸಂಸ್ಪೃಷ್ಟೋ ದಹತ್ಯೇವಹಿಪಾವಕಃ''** ಇಚ್ಛೆಯಿಲ್ಲದೇ ಮುಟ್ಟಿದರು ಅಗ್ನಿಯು ಮುಟ್ಟಿದವರನ್ನು ಸುಡುವಂತೆ, ಇಚ್ಛೆಯಿಲ್ಲದೇ ಹರಿಸ್ಮರಣೆ ಮಾಡಿದರೂ ಅವನು ದುಷ್ಟರಾದವರ ಪಾಪವನ್ನು ಹೋಗಲಾಡಿಸುತ್ತಾನೆ. **ಆದುದರಿಂದಲೇ 'ಹರಿ' ಎಂದು ಹೆಸರಾಯಿತು.** ಅಂತಹ ಗುಣ, ರೂಪ, ವೈಭವ ಗಳಿಂದ ಸರ್ವತ್ರ ಪೂರ್ಣನಾಗಿರುವ ಶ್ರೀಹರಿಯು ಅವರ ಪ್ರಾರ್ಥನೆಯನ್ನು ಮನ್ನಿಸಿ ''ಹಂಸ'' ಎಂಬ ನಾಮದಿಂದ ಪೀಠಾರೂಢನಾಗಿ ಉತ್ತರಿಸಿ ಅನುಗ್ರಹಿಸಿದರು. ಪರಮಾತ್ಮನೇ ಸಾಕ್ಷಾತ್ತಾಗಿ ಪೀಠಾರೂಢನಾಗಿ ಉತ್ತರಿಸಿದ ಪೀಠವೇ ''ಉತ್ತರಾದಿ ಮಠ''. ಈ ಪೀಠವನ್ನಲಂಕರಿಸಿದ ಯತಿವರೇಣ್ಯರೆಲ್ಲರು ಶ್ರೀ ಮೂಲರಾಮನ ಅನುಗ್ರಹಕ್ಕೆ ಪಾತ್ರರಾಗಿ ಭಕ್ತ ಜನರನ್ನು ಉದ್ಧರಿಸಿದವರು. ಗಂಗಾಜನಕನನ್ನು ಒಲಿಸಿ ಕೊಂಡ ಯತಿವರೇಣ್ಯರು ಗಂಗಾದೇವಿಯನ್ನು ಸಾಕ್ಷಾತ್ಕರಿಸಿಕೊಳ್ಳುವುದರಲ್ಲಿ ಆಶ್ಚರ್ಯವೇನು!

*

ಗ್ರಂಥ ಋಣ

1. **ಸತ್ಕಥಾ**
2. **ಪ್ರಣೇತಾ – ಸ್ಮರಣ ಸಂಚಿಕೆ 2002** – *ಚಾತುರ್ಮಾಸ್ಯ ಸೇವಾ ಸಮಿತಿ,* *ಶ್ರೀ ಉತ್ತರಾದಿ ಮಠ, ಮೈಸೂರು*
3. **Sri Math Uttaradhi Math** *by Sri C.R. Rao*
4. **History of the Dvaita School of Vedantha** *by Sri B.N.K. Sharma*
5. **ನಿಜ ಕಾಮಧೇನು – ತಪೋನಿಧಿ ಶ್ರೀ ಸತ್ಯಬೋಧರು** – *ಸವಣೂರ –ಸ್ಮರಣಸಂಚಿಕೆ*



ಬೆಂಗಳೂರು ಚಿಕ್ಕಪೇಟೆ,
ಉತ್ತರಾದಿ ಮಠದಲ್ಲಿರುವ ಮುಖ್ಯ ಪ್ರಾಣ ದೇವರು